ಸಂಪುಟ 01 | ಸಂಚಿಕೆ 140 | ಮಂಗಳವಾರ 18 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ನೆವರ್ ಗಿವ್ ಅಪ್ ಡೇ (Never Give Up Day)**

ಕಷ್ಟಗಳು ಮತ್ತು ಸವಾಲುಗಳು ಎದುರಾದರೂ ಧೈರ್ಯ ಕಳೆದುಕೊಳ್ಳದೆ, ಸೋಲಿಗೆ ಮಣಿಯದೆ ನಿರಂತರವಾಗಿ ಪ್ರಯತ್ನಿಸುತ್ತಿರಬೇಕು ಎಂಬ ಸ್ಫೂರ್ತಿದಾಯಕ ಸಂದೇಶ ನೀಡುವ ದಿನ.
"ಸೋಲು ಅಂತ್ಯವಲ್ಲ; ಮತ್ತೆ ಪ್ರಯತ್ನಿಸುವ ಅವಕಾಶ."

**2) ರಾಷ್ಟ್ರೀಯ ಫಜಿಟಾ ದಿನ (National Fajita Day)**

ಅಮೆರಿಕದಲ್ಲಿ ಜನಪ್ರಿಯವಾಗಿರುವ ಫಜಿಟಾ ಎಂಬ ಆಹಾರವನ್ನು ಆಚರಿಸುವ ದಿನ. ಫಜಿಟಾ ಸಾಮಾನ್ಯವಾಗಿ ಬೇಯಿಸಿದ ಮಾಂಸ, ತರಕಾರಿಗಳು ಮತ್ತು ಟೋರ್ಟಿಲ್ಲಾಗಳೊಂದಿಗೆ ತಯಾರಿಸಲಾಗುತ್ತದೆ.

## ಸುಭಾಷಿತ

ಸೋಮಾರಿಯಾದವನು ತನ್ನ ಹಿತವನ್ನು ನೋಡಿಕೊಳ್ಳಲಾರ; ಇತರರಿಗೂ ಸಹಾಯ ಮಾಡಲಾರ.

-ಗೌತಮ ಬುದ್ಧ

## ನಾಗರ ಪಂಚಮಿ: ಭಕ್ತಿ, ಪ್ರಕೃತಿ ಆರಾಧನೆ ಮತ್ತು ಸಂಪ್ರದಾಯದ ಸಮ್ಮಿಲನ

❑ ನೈಜ್ಯ ದೇಸೆ ನ್ಯೂಸ್

ತಾಳಿಕೋಟೆ:ಶ್ರಾವಣ ಮಾಸದ ಪ್ರಮುಖ ಹಬ್ಬಗಳಲ್ಲಿ ಒಂದಾದ ನಾಗರ ಪಂಚಮಿಯನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಭಕ್ತಿಭಾವದಿಂದ ಆಚರಿಸಲಾಗುತ್ತದೆ. ನಾಗದೇವರನ್ನು ಪೂಜಿಸುವ ಈ ಹಬ್ಬವು ಕೇವಲ ಧಾರ್ಮಿಕ ಆಚ-ರಣೆಯಷ್ಟೇ ಅಲ್ಲದೆ ಪ್ರಕೃತಿ, ಕೃಷಿ ಮತ್ತು ಜೀವಜಾಲದೊಂದಿಗೆ ಮಾನವನ ಬಾಂಧವ್ಯವನ್ನು ಪ್ರತಿಬಿಂಬಿಸುವ ವಿಶಿಷ್ಟ ಸಂಪ್ರದಾಯವಾಗಿದೆ. ಪುರಾಣಗಳ ಪ್ರಕಾರ ನಾಗದೇವರು ಭೂಮಿ, ನೀರು ಹಾಗೂ ಸಂಪತ್ತಿನ ರಕ್ಷಕರಾಗಿದ್ದಾರೆ. ಶಿವನ ಕಂಠದಲ್ಲಿರುವ ವಾಸುಕಿ ನಾಗ, ವಿಷ್ಣುವಿನ ಶೇಷನಾಗ ಹಾಗೂ ಶ್ರೀಕೃಷ್ಣನು ಕಾಳಿಯ ಮರ್ಧನ ಮಾಡಿದ ಕಥೆಗಳು ನಾಗಾರಾಧನೆಗೆ ವಿಶೇಷ ಮಹತ್ವವನ್ನು ನೀಡಿವೆ. ನಾಗರ ಪಂಚಮಿಯ ಆಚರಣೆಯು ಮಹಾಭಾರತದ ಜನಮೇಜಯನ ಸರ್ಪಯಾಗದ ಕಥೆಯೊಂದಿಗೂ ಸಂಬಂಧ



ಹೊಂದಿದೆ ಎಂದು ನಂಬಲಾಗಿದೆ.ಕೃಷಿ ಪ್ರಧಾನ ಸಮಾಜದಲ್ಲಿ ಹಾವುಗಳನ್ನು ರೈತರ ಸ್ನೇಹಿತರೆಂದು ಪರಿಗಣಿಸಲಾಗುತ್ತದೆ. ಹೊಲಗಳಲ್ಲಿನ ಇಲಿಗಳು ಹಾಗೂ ಕೀಟಗಳನ್ನು ನಿಯಂತ್ರಿಸುವ ಮೂಲಕ ಬೆಳೆಗಳನ್ನು ರಕ್ಷಿಸುವ ಹಾವುಗಳಿಗೆ ಕೃತಜ್ಞತೆ ಸಲ್ಲಿಸುವ ಸಂಕೇತವಾಗಿ ನಾಗರ ಪಂಚಮಿಯನ್ನು ಆಚರಿಸಲಾಗುತ್ತದೆ. ಈ ಹಬ್ಬವು ಪ್ರಕೃತಿ ಸಂರಕ್ಷಣೆ ಹಾಗೂ ಜೀವಜಂತುಗಳ ಬಗ್ಗೆ ಗೌರವವನ್ನು ಬೆಳೆಸುವ ಸಂದೇಶವನ್ನೂ ಸಾರುತ್ತದೆ. ಹಬ್ಬದಂದು ಮಹಿಳೆಯರು ಹುತ್ತದ ಮಣ್ಣಿನಿಂದ ನಾಗದೇವರ ಪ್ರತಿಕೃತಿ ನಿರ್ಮಿಸಿ ಪೂಜೆ ಸಲ್ಲಿಸುತ್ತಾರೆ. ನಾಗರಕಲ್ಲುಗಳಿಗೆ ಹಾಲು, ಅರಿಶಿನ, ಕುಂಕುಮ, ಹೂವುಗಳನ್ನು ಅರ್ಪಿಸಿ ಕುಟುಂಬದ ಸುಖ-ಶಾಂತಿ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸುತ್ತಾರೆ. ಅನೇಕರು ಉಪವಾಸ ವ್ರತ ಆಚರಿಸಿ ಸಂಜೆಯ ವೇಳೆ ವಿವಿಧ ಬಗೆಯ ನೈವೇದ್ಯಗಳನ್ನು ಸಮರ್ಪಿಸುತ್ತಾರೆ. ಮನೆಗಳಲ್ಲಿ ಜೋಕಾಲಿ ಕಟ್ಟುವುದು, ಹಂಗನೂಲು ಧ-ರಿಸುವುದು ಹಾಗೂ ಮಕ್ಕಳೊಂದಿಗೆ ಸಂಭ್ರಮಿಸುವುದು ಈ ಹಬ್ಬದ ವಿಶೇಷ ಸಂಪ್ರದಾಯಗಳಾಗಿವೆ.ಹಿಂದಿನಿಂದಲೂ ನಾಗರ ಪಂಚಮಿಯಂದು ಭೂಮಿಯನ್ನು ಅಗೆಯಬಾರದು ಎಂಬ ನಂಬಿಕೆ ಇದೆ. ಮಳೆಗಾಲದಲ್ಲಿ ಹಾವುಗಳು ತಮ್ಮ ವಾಸಸ್ಥಾನಗಳಿಂದ ಹೊರಬರುವುದ-ರಿಂದ ಅವುಗಳಿಗೆ ಹಾನಿಯಾಗದಂತೆ ಈ ಆಚ-ರಣೆ ರೂಪುಗೊಂಡಿದೆ ಎನ್ನಲಾಗುತ್ತದೆ. ಇದ-ರಿಂದ ಪರಿಸರ ಸಂರಕ್ಷಣೆಯ ಸಂದೇಶವೂ ಅಡಕವಾಗಿದೆ.ಇಂದಿನ ಆಧುನಿಕ ಯುಗದಲ್ಲಿಯೂ ನಾಗರ ಪಂಚಮಿ ತನ್ನ ಸಾಂಸ್ಕೃತಿಕ ಮಹತ್ವವನ್ನು ಉಳಿಸಿಕೊಂಡಿದ್ದು, ಭಕ್ತಿ, ಸಂಪ್ರದಾಯ ಮತ್ತು ಪ್ರಕೃತಿ ಪ್ರೀತಿಯ ಪ್ರತೀಕವಾಗಿ ಜನಮನಗಳಲ್ಲಿ ವಿಶೇಷ ಸ್ಥಾನ ಪಡೆದಿದೆ.

### ಸಾಮೂಹಿಕ ವಿವಾಹದ ಮೂಲಕ ಬಡವರಿಗೆ ಕಂಕಣ ಭಾಗ್ಯ : ಹೊಸಕೋಟೆ ಜಗದೀಶ

## ನವ ವಸಂತಕ್ಕೆ ಕಾಲಿಟ್ಟ 10 ಜೋಡಿ ವಧು-ವರರು

❑ ನೈಜ್ಯ ದೇಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲೂಕಿನ ಮೆಟ್ರಿ ಗ್ರಾಮದಲ್ಲಿರುವ ಸಹಸ್ರಾರು ಭಕ್ತರ ಆರಾಧ್ಯ ದೈವ ಶ್ರೀ ಅಂಬಾದೇವಿ, ಶ್ರೀ ನಾಗಲಿಂಪ್ಪ ತಾತ ಸುಕ್ಷೇತ್ರ ಧರ್ಮಮಠದಲ್ಲಿ ದೇವಸ್ಥಾನದ ಪ್ರಥ-ಮ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ನಡೆದ ಉಚಿತ ಸಾಮೂಹಿಕ ವಿವಾಹದಲ್ಲಿ 10 ಜೋಡಿ ನವ ವಧು-ವರರು ಹೊಸ ಜೀವನಕ್ಕೆ ಕಾಲಿಟ್ಟರು. ಇಲ್ಲಿನ ನಾಗಲಿಂಗಪ್ಪ ತಾತ ಮಠದ ಶ್ರೀ ಕುಮಾರ ತಾತನವರ ದಿವ್ಯ ಸಾನಿಧ್ಯದಲ್ಲಿ ಸಾಮೂಹಿಕ ವಿವಾಹಗಳು ಜರುಗಿದವು. ನಂತರ ವೀರಶೈವ ಲಿಂಗಾಯತ ಮಹಾ ವೇದಿಕೆ ಜಿಲ್ಲಾಧ್ಯಕ್ಷ



ಹೊಸಕೋಟೆ ಜಗದೀಶ ಮಾತನಾಡಿ, ಮೊದಲಿಗೆ ನಾಗಲಿಂಗಪ್ಪ ತಾತ ಗುಡ್ಡದಲ್ಲಿ ವಾಸವಾಗಿದ್ದರು. ಕೆಲವರ ಅಡಚಣೆಯಿಂದ ಗ್ರಾಮದ ತಮ್ಮ ನಿವಾಸದಲ್ಲಿ ತೇರು ಮಾಡಿಸಿ, ದೇವಸ್ಥಾನ ನಿರ್ಮಿಸಿ, ಭಕ್ತರ ಆರಾಧನೆಗೆ ಸುವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಚಿಕ್ಕ ವಯಸ್ಸಿನಿಂದಲೂ ನಾಗಲಿಂಗಪ್ಪ ತಾತನ ಪವಾಡ ದೊಡ್ಡದಿದೆ. ಮಠವೂ ಅಭಿವೃದ್ಧಿ ಹೊಂದುತ್ತಿದೆ. ಬಳ್ಳಾರಿ, ಕೊಪ್ಪಳ, ವಿಜಯನಗರ, ರಾಯಚೂರು ಸೇರಿದಂತೆ ನಾನಾ ಹೊರ ಜಿಲ್ಲೆಯಿಂದ ಸಾಕಷ್ಟು ಭಕ್ತರು ಆಗಮಿಸಿ, ಇಲ್ಲಿನ ಅಜ್ಜನ ದರ್ಶನದೊಂದಿಗೆ ಬೇಡಿಕೆಗಳನ್ನು ಈಡೇ-ರಿಸಿಕೊಳ್ಳಲಿದ್ದಾರೆ. ಇಂದಿನ ಆಧುನಿಕ ದಿನದಲ್ಲಿ ಬಡವರ ಬದುಕು ಕಷ್ಟಕರ. ಆದ್ರಿಂದ ಇಂತಹ ಉಚಿತ ಸಾಮೂಹಿಕ ವಿವಾಹದ ಮೂಲಕ ಬಡವರಿಗೆ ಕಂಕಣ ಭಾಗ್ಯ ಕಲ್ಪಿಸಲಾಗುತ್ತಿದೆ. ಈ ಸಾಮೂಹಿಕ ವಿವಾಹದಿಂದ ಬಡವರು ಆರ್ಥಿಕ ಹೊರೆಯಿಂದ ಹೊರ ಬಂದು, ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯ. ನೂತನ ವಧು-ವರರು ಸಹಬಾಳ್ವೆಯೊಂದಿಗೆ ಅನ್ಯೋನ್ಯವಾಗಿ ಬದುಕು ಕಟ್ಟಿಕೊಂಡು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಬಡತನವನ್ನು ದೂರ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಕುಂಬಾರ್ ರಾಜಪ್ಪ, ಹೆಚ್.ಗಂಗಾಧರ ಮೆಟ್ರಿ, ನಾಗೇಂದ್ರಪ್ಪ, ನೆಣಕಿ ಗಿರೀಶ, ಹೆಚ್.ಕುಮಾರ, ಉಪ್ಪಾರಹಳ್ಳಿ ಕೊಂಡಪ್ಪ, ಕೆ.ನಾಗಲಿಂಗ, ಪಂಪಾಪತಿ, ಗಾದಿಲಿಂಗ, ಎ.ದೊಡ್ಡನಗೌಡ ಸೇರಿದಂತೆ ಸ್ಥಳೀಯ, ಸುತ್ತಮುತ್ತಲಿನ ಸದ್ಭಕ್ತರು ಪಾಲ್ಗೊಂಡಿದ್ದರು. ನಂತರ ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಲಾಗಿ-ತ್ತು.ವರದಿ : ಜಿಲಾನಸಾಬ್ ಬಡಿಗೇರ್

## ಪಿಕೆಪಿಎಸ್ ದಿಂದ ಶ್ರೀಗಳಿಗೆ ಗೌರವ ಸಮರ್ಪಣೆ

❑ ನೈಜ್ಯ ದೇಸೆ ನ್ಯೂಸ್

ತಾಳಿಕೋಟೆ: ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದ ಪರಮ ಪೂಜ್ಯರಾದ ಶ್ರೀ ಸಿದ್ದಲಿಂಗ ದೇವರು ಇವರಿಗೆ ಲಿಂಗದಳ್ಳಿ ಗ್ರಾಮದ ಪ್ರಾಥ-ಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಗ್ರಾಮದಲ್ಲಿ ಆಗಸ್ಟ್ 13 ರಿಂದ 15 ರವರೆಗೆ ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಹಮ್ಮಿಕೊಂಡ "ಅಜ್ಜನ ನಡೆ ಹಳ್ಳಿಯ ಕಡೆ" ಕಾರ್ಯಕ್ರಮದಲ್ಲಿ ಶ್ರೀಗಳು ಭಾಗವಹಿಸಿಲು ಆಗಮಿಸಿದಾಗ ಅವರನ್ನು



ಸಹಕಾರಿ ಸಂಘದ ಕಾರ್ಯಾಲಯಕ್ಕೆ ಆಮಂತ್ರಿಸಿ ಸಂಘದ ಆಡಳಿತ ಮಂಡಳಿ ಸದಸ್ಯರ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಶ್ರೀಗಳು ಸಂಘಗಳು ಪರಸ್ಪರ ಸಹಕಾರ ಹಾಗೂ ವಿಶ್ವಾಸದಿಂದ ನಡೆಯುತ್ತವೆ. ರೈತರ ಏಳಿಗೆಗಾಗಿ ಅಸ್ತಿತ್ವದಲ್ಲಿ ಬಂದ ಈ ಸಂಘಗಳು ಇಂದು ಹೆಮ್ಮರವಾಗಿ ಬೆಳೆದಿರುವುದು ಸಂತೋಷದ ವಿಷಯ ಆದ-ರೆ ಯಾವ ಕಾರಣಕ್ಕೂ ಜನರ ವಿಶ್ವಾಸಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಂಡು ಹೋಗಿ ಎಂದು ಸಲಹೆ ನೀಡಿದರು.ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಬಿ.ಐ.ಬಸರಕೋಡ, ಸದಸ್ಯರಾದ ಎಚ್.ಎಸ್.ಮುದನೂರ, ಎಚ್ ಎಸ್ ಬಿರಾದಾರ,ಜಿ. ಎಸ್. ವಾಲಿಕಾರ, ಎನ್.ಬಿ.ಹೊಸಮನಿ,ಆರ್.ಎಂ. ಹೊಸಮನಿ, ಎಸ್.ಬಿ.ಪಾಟೀಲ, ಶ್ರೀಮತಿ ಜಿ.ಎಸ್.ನಾಡಗೌಡ, ಗಣ್ಯರಾದ ಎ.ಎಸ್. ನಾಡಗೌಡ,ಮಧುಗೌಡ ಎಸ್. ಬಿರಾದಾರ, ಎಂ.ಬಿ.ಮೇಟಿ,ಪಿ.ಬಿ.ಪಾಟೀಲ, ಬಿ.ಸಿ.ಮಠ, ಆರ್.ಪಿ.ಪಾಟೀಲ, ಜಿ. ಎಸ್ ಮೇಟಿ, ಸಂಘದ ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

## ಅಬಾಕಸ್ ಮತ್ತು ಮಾನಸಿಕ ಗಣಿತ ಸ್ಪರ್ಧೆಯಲ್ಲಿ ಎ – 1 ವಿದ್ಯಾರ್ಥಿಗಳ ಸಾಧನೆ

❑ ನೈಜ್ಯ ದೇಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಗ್ಯಾಲಕ್ಸಿ ಎಜು ಇನ್ನೋವೇಷನ್ ಸಂಸ್ಥೆ ಚಿತ್ರದುರ್ಗದ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ನಡೆಸಿದ ಎಂಟನೇ ಅಬಾಕಸ್ ಮತ್ತು ಮಾನಸಿಕ ಗಣಿತ ಸ್ಪರ್ಧೆಯಲ್ಲಿ ಸ್ಥಳೀಯ ಎ-1 ಅಬಾಕಸ್ ಸೆಂಟ-ರ್ ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.ಸೆಂಟರ್ ನಿಂದ ಒಟ್ಟು 56



ವಿದ್ಯಾರ್ಥಿಗಳು ಭಾಗವಹಿಸಿದ್ದು, ಅವರಲ್ಲಿ ಲಿಖಿದ್ ಕಲ್ಯಾಣ್, ಜಿ.ನಿಹಾಲ್, ಎಂ.ತಸ್ಮಿಯಾ, ಎಂ.ಸಮೀರ್ ಹಾಗೂ ಬಿ.ಸಾತ್ವಿಕ್ ಇವರು ಚಾಂಪಿಯನ್ ಆಗಿದ್ದಾರೆ.ಉಳಿದವರಲ್ಲಿಏಳು ವಿದ್ಯಾರ್ಥಿಗಳು ಮೊದಲ ರನ್ನರ್ ಅಪ್, ಏಳು ವಿದ್ಯಾರ್ಥಿಗಳು ಎರಡನೇ ರನ್ನರ್ ಅಪ್, ಏಳು ವಿದ್ಯಾರ್ಥಿಗಳು ಮೂರನೇ ರನ್ನರ್ ಅಪ್, ನಾಲ್ಕು ವಿದ್ಯಾರ್ಥಿಗಳು ನಾಲ್ಕನೇ ರನ್ನರ್ ಅಪ್ , ಐದು ವಿದ್ಯಾರ್ಥಿಗಳು ಐದನೇ ರನ್ನರ್ ಅಪ್ ಆಗಿ, ಮೂರು ವಿದ್ಯಾರ್ಥಿಗಳು ಆರನೇ ರನ್ನರ್ ಅಪ್ ಆಗಿ, ಆರು ವಿದ್ಯಾರ್ಥಿಗಳು ಏಳನೇ ರನ್ನರ್ ಅಪ್ ಆಗಿ ಹಾಗೂ 12 ವಿದ್ಯಾರ್ಥಿಗಳು ಸಮಾಧಾನಕರ ಬಹುಮಾನ ಪಡೆದು ಸೆಂಟ-ರ್ ನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಎ – 1 ಅಬಾಕಸ್ ಸಂಸ್ಥೆಯ ಮುಖ್ಯಸ್ಥ ಬೆಲ್ಲದ್ ಗಿರೀಶ್ ವಿದ್ಯಾರ್ಥಿಗಳ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಸ್ಥ ಬೆಲ್ಲದ ಗಿರೀಶ್, ಸಹಾಯಕಿಯರಾದ ಭಾರತಿ, ಶಿಲ್ಪಾ, ಉಷಾ, ಜ್ಯೋತಿ, ವೈಷ್ಣವಿ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು. ವರದಿ : ಜಿಲಾನಸಾಬ್ ಬಡಿಗೇರ್

## ಭಾರತ್ ಜೋಡೋಗೆ ದೊಡ್ಡ ಬಸವರಾಜ ಬಡಗಿ ಅವರ ಪ್ರಪ್ರಥಮ ಸದಸ್ಯತ್ವ ನೋಂದಣಿ

❑ ನೈಜ್ಯ ದೇಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಕಂಪ್ಲಿ ತಾಲೂಕು ಸೇ-ರಿದಂತೆ ಕ್ಷೇತ್ರದಲ್ಲಿ ಆರಂಭಗೊಂಡ ಭಾರತ್ ಜೋಡೋ ಯುವ ಸಂಘ ಸ್ಥಾಪನೆ ಸಂಬಂಧ ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಭಾರತ್ ಜೋಡೋ ಯುವ ಮಿಷನ್‌ಗೆ ದೊಡ್ಡ ಬಸವರಾಜ ಬಡಗಿ ಅವರಿಂದ ಪ್ರಪ್ರಥಮ ಸದಸ್ಯತ್ವ ನೋಂದಣಿಯಾಗಿದೆ. ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಜೆ.ಎನ್. ಗಣೇಶ್ ಅವರ ನಿರ್ದೇಶನದಂತೆ, ಕ್ಷೇತ್ರದಲ್ಲಿ ಭಾರತ್ ಜೋಡೋ ಯುವ ಮಿಷನ್ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಡಲಾಗಿದೆ.ಕಂಪ್ಲಿ ವಿಧಾನಸಭಾ ಕ್ಷೇತ್ರದ ಬೆಳಗೋಡು ಗ್ರಾಮದ ಕಾಂಗ್ರೆಸ್ ಮುಖಂಡರಾದ ದೊಡ್ಡ ಬಸವರಾಜ ಬಡಗಿ ಅವರು ಕ್ಷೇತ್ರದಲ್ಲಿ ಪ್ರಪ್ರಥಮವಾಗಿ ಭಾರತ್



ಜೋಡೋ ಯುವ ಮಿಷನ್ ಸದಸ್ಯತ್ವವನ್ನು ನೋಂದಾಯಿಸಿಕೊಂಡಿದ್ದರೆ. ಯುವಕರನ್ನು ಸಂಘಟಿಸಿ, ಸಾಮಾಜಿಕ ಸೇವೆ, ಜನಪರ ಕಾರ್ಯಗಳು ಹಾಗೂ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಭಾರತ್ ಜೋಡೋ ಯುವ ಮಿಷನ್‌ನೊಂದಿಗೆ ಕೈಜೋಡಿಸಲಾಗುವುದು. ಕ್ಷೇತ್ರದ ಯುವಕರನ್ನು ಒಗ್ಗೂಡಿಸಿ, ಸಾಮಾಜಿ-ಕ ಸೇವೆ ಹಾಗೂ ಜನಪರ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ್ ಜೋಡೋ ಯುವ ಮಿಷನ್ ಮೂಲಕ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತೇನೆ. ಕ್ಷೇತ್ರದ ಪ್ರತಿಯೊಂದು ಗ್ರಾಮದ ಯುವಕರಿಗೂ ಸಂಘಟನೆಯ ಆಶಯಗಳನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ" ಎಂದು ಯುವ ಮುಖಂಡ ದೊಡ್ಡ ಬಸವರಾಜ ಬಡಗಿ ತಿಳಿಸಿದ್ದಾರೆ.ವರದಿ : ಜಿಲಾನಸಾಬ್ ಬಡಿಗೇರ್

### ನನ್ನ ಶಾಲೆ ನನ್ನ ಕೊಡುಗೆ ಮಹತ್ವಕಾಂಕ್ಷೆ ಯೋಜನೆ

❑ ನೈಜ್ಯ ದೇಸೆ ನ್ಯೂಸ್



ತಾಳಿಕೋಟಿ: ಸರ್ಕಾರದ ಮಹಾತ್ವಾಕಾಂಷಿ ಯೋಜನೆಗಳಲ್ಲಿ ಒಂದಾದ "ನನ್ನ ಶಾಲೆ, ನನ್ನ ಕೊಡುಗೆ "ಅಡಿಯಲ್ಲಿ ಸರ್ಕಾರಿ ಶಾಲೆಗಳನ್ನು ಸಮುದಾಯದ ಸಹಕಾರದೊಂದಿಗೆ ಬಲಪಡಿಸುವದಾಗಿದೆ. ಬಹು ಮಹತ್ವ ಈ ಯೋಜನೆಯಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಸ್ಕಾನಾಳ ಈ ಶಾಲೆಯಲ್ಲಿ ಓದಿ ಇಂದುತಾಳಿಕೋಟಿ ಯಲ್ಲಿ ವ್ಯಾಪಾರ ಹಾಗೂ ಉದ್ದಿಮೆಗಳನ್ನ ನಡೆಸಿ ಉತ್ತಮವಾದ ಬದುಕು ಕಟ್ಟಿಕೊಂಡಿರುವ ಶ್ರೀ ಮಲ್ಲಿಕಾರ್ಜುನ ಮದರಕಲ್ಲ(ಅಡತ ವ್ಯಾಪಾರಸ್ಥರು. ೦ಕಒಅ.) ಇವರು ಸ್ವಾತಂತ್ರ ದಿನಾಚರಣೆಯ ಶುಭ ಸಂದರ್ಭದಲ್ಲಿ ಶಾಲೆಗೆ ಸ್ಮಾರ್ಟ್ ಎಲ್ ಇ ಡಿ ಟಿ ವಿ ಯನ್ನು ಕಾಣಿಕೆಯಾಗಿ ನೀಡಿದ್ದಾರೆ. ಇದರಿಂದ ಮಕ್ಕಳಿಗೆ ವಿಜ್ಞಾನ, ಗಣಿತ ಇತ್ಯಾದಿ ಯು ಟ್ಯೂಬ್ ಗಳ ಪಠ್ಯ ಹಾಗೂ ಪಠ್ಯತರ ಚಟುವಟಿಕೆಗಳನ್ನು ಮಕ್ಕಳಿಗೆ ವೀಕ್ಷಣೆ ಮಾಡಲು ಅನುಕೂಲ ಮಾಡಿಕೊಟ್ಟರು 2) ಅದೇ ರೀತಿಯಲ್ಲಿ ತಾಳಿಕೋಟಿಯಲ್ಲಿ ಶರಣ ಮುತ್ಯಾ ದೇವಸ್ಥಾನದ ಆವರಣದಲ್ಲಿ ಡೆಸ್ಕ್ ಹಾಗೂ ಟ್ರೇಜರಿಗಳನ್ನು ತಯಾರಿಸುವ ಉದ್ಯಮ ನಡೆಸುತ್ತಿರುವ ಶ್ರೀ ದೇವರಡ್ಡಿ ಮದರಕಲ್ಲ ಇವರು ಗ್ರೀನ್ ಬೋರ್ಡ್ ನ್ನು ಕಾಣಿಕೆಯಾಗಿ ನೀಡಿ ಮಕ್ಕಳ ಕಲಿಕೆಗೆ ಅನುವು ಮಾಡಿದ್ದಾರೆ. ಹೀಗಾಗಿ ಅವರನ್ನು ಸರ್ಕಾರಿ ಪ್ರಾಥಮಿಕ ಶಾಲೆ ಮಸ್ಕಾನಾಳದಲ್ಲಿ ಶಾಲಾ ಸರ್ವ ಬಳಗದ ವತಿಯಿಂದ ಸನ್ಮಾನಿಸಲಾಯಿತು.

### ಬಾಲ್ಯ ವಿವಾಹ, ಪೋಕ್ಸೊ ಮತ್ತು ಅತ್ಯಾಚಾರ ಸೇರಿ ಮೂರು ಪ್ರಕರಣ ದಾಖಲು

❑ ನೈಜ್ಯ ದೇಸೆ ನ್ಯೂಸ್



ಬಳ್ಳಾರಿ / ಕುರುಗೋಡು : ತಾಲ್ಲೂಕಿನ ಗ್ರಾಮವೊಂದರ ನಿವಾಸಿ ರಾಜಶೇಖರ ಎನ್ನುವ ಯುವಕನ ಮೇಲೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಬಾಲ್ಯವಿವಾಹ, ಪೋಕ್ಸೊ ಮತ್ತು ಅತ್ಯಾಚಾರ ಸೇರಿ ಮೂರು ಪ್ರಕರಣ ದಾಖಲಾಗಿವೆ.ತಾಲ್ಲೂಕಿನ ಗ್ರಾಮವೊಂದರ ಬಾಲಕಿಂ-ಯನ್ನು 11 ನವೆಂಬರ್ 2025 ರಂದು ವಿವಾಹವಾಗಿದ್ದ. ನಂತರ ಗರ್ಭವತಿಯಾದ ಬಾಲಕಿಯನ್ನು ಹೆರಿಗೆಗೆ ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಗಸ್ಟ್ 15 ರಂದು ಬೆಳಿಗ್ಗೆ ಗಂಡು ಮಗುವಿಗೆ ಜನ್ಮನೀಡಿದ ಬಾಲಕಿ ಹೆಚ್ಚು ರಕ್ತಸ್ರಾವವಾಗಿ ಅಂದೇ ರಾತ್ರಿ ಮೃತಪಟ್ಟಿದ್ದಾರೆ.ಮೃತ ಬಾಲಕಿಯ ಮಾವ ನೀಡಿದ ದೂರಿನ ಮೇಲೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜಶೇಖರನನ್ನು ವಶಕ್ಕೆ ಪಡೆದ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.ವರದಿ : ಜಿಲಾನಸಾಬ್ ಬಡಿಗೇರ್

## ಸಾಹಿತ್ಯ ಸಿಂಚನ

### ದೇವದಾಸಿ

ದೇವರ ಹೆಸರಲ್ಲಿ ದಾಸಿಯಾದಳು
ಬದುಕಿನ ಬೆಳಕನ್ನೇ ಕಳೆದುಕೊಂಡಳು
ಹೂವಿನಂತೆ ಅರಳಬೇಕಾದ ಬಾಲ್ಯ
ಮುಡಿಯಾಗದೆ ಮಣ್ಣು ಪಾಲಾಯಿತು

ದೇವಾಲಯದ ಗಂಟೆಯ ನಾದದಲ್ಲಿ
ಅವಳ ಕಣ್ಣೀರಿನ ಶಬ್ದ ಯಾರಿಗೂ ಕೇಳಲಿಲ್ಲ
ಆರತಿ ಬೆಳಕಿನಲ್ಲಿ ಕಂಗೊಳಿಸಿದಳು
ಆದ್ರೆ ಬದುಕಿನ ಕತ್ತಲಲ್ಲಿ ಒಂಟಿಯಾದಳು

ಸಮಾಜ ಅವಳನ್ನು ದೇವತೆ ಎಂದಿತು
ಆದರೆ ಮನುಷ್ಯಳಾಗಿ ಕಾಣಲಿಲ್ಲ
ಹಾಡು ಕುಣಿತ ಕಲಿಸಿದರು
ಆದ್ರೆ ಸ್ವತಂತ್ರ ಬದುಕು ಕೊಡಲಿಲ್ಲ

ಕನಕ ದಾಸ "ಕುಲ ಕುಲವೆಂದು" ಕೇಳಿದ
ಬಸವಣ್ಣ "ಕಾಯಕವೇ ಕೈಲಾಸ" ಎಂದ
ಆದ್ರೆ ಇವಳ ಕುಲ ಯಾವುದು?
ಇವಳ ಕಾಯಕ ಯಾವುದು ?

ಈಗ ಕಾನೂನು ಅವಳ ಕೈ ಹಿಡಿದಿದೆ
ಶಿಕ್ಷಣ ಅವಳಿಗೆ ದಾರಿ ತೋರಿದೆ
ದೇವದಾಸಿಯಲ್ಲ, ದೇವತೆಯ ಮಗಳು ಅವಳು
ಸ್ವಾಭಿಮಾನದ ಬದುಕು ಅವಳ ಹಕ್ಕು

ಮೂಢನಂಬಿಕೆ ಸುಟ್ಟು ಬೂದಿ ಮಾಡೋಣ
ಹೆಣ್ಣುಮಕ್ಕಳಿಗೆ ಗೌರವ ಕೊಡೋಣ
ದೇವರು ಇರೋದು ಗುಡಿಯಲ್ಲಿ ಅಲ್ಲ
ಪ್ರತಿ ಜೀವದ ಉಸಿರಿನಲ್ಲಿ

ಮತ್ತೊಬ್ಬ ದೇವದಾಸಿ ಹುಟ್ಟದಿರಲಿ
ಇದೇ ನನ್ನ ಪ್ರಾರ್ಥನೆ,
ಇದೇ ನನ್ನ ಕವನ

– ಎಸ್. ದುರಗಪ್ಪ.
ಕುಷ್ಟಗಿ.ಬರಹಗಾರ
ಹಾಗೂ ಚಲನಚಿತ್ರ ನಟ

## ಬುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ನಾಗರ ಪಂಚಮಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್



ಕುಷ್ಟಗಿ: ತಾಲೂಕಿನ ಬುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ನಾಗರ ಪಂಚಮಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳೆಯರು ನಾಗಪ್ಪನಿಗೆ ಹಾಲು ಎರೆಯುವ ಮೂಲಕ ವಿಶೇಷ ಪೂಜೆ ಸಲ್ಲಿಸಿ, ಕುಟುಂಬದ ಸುಖ, ಶಾಂತಿ, ಆರೋಗ್ಯ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಮಾಜಿ ಸೈನಿಕರಾದ ಶಿವಾಜಿ ಹಡಪದ ಮಾತನಾಡಿ, ಶ್ರಾವಣ ಮಾಸದ ನಾಗರ ಪಂಚಮಿ ಅತ್ಯಂತ ಪವಿತ್ರವಾದ ದಿನವಾಗಿದ್ದು, ಭಕ್ತಿ ಮತ್ತು ಸಂಪ್ರದಾಯದ ಪ್ರತೀಕವಾಗಿದೆ. ಹಿಂದೂ ಧರ್ಮದಲ್ಲಿ ನಾಗರ ಪಂಚಮಿಗೆ ವಿಶೇಷ ಪ್ರಾಮುಖ್ಯತೆ ಇದೆ. ಈ ದಿನ ನಾಗದೇವತೆಗೆ ಹಾಲು, ಅರಿಶಿನ, ಕುಂಕುಮ ಹಾಗೂ ಮಂಡಕ್ಕಿ (ಪುರಿ) ಅಥವಾ ತಂಬಿಟ್ಟು ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುವ ಪದ್ಧತಿ ತಲೆತಲಾಂತರಗಳಿಂದ ನಡೆದುಕೊಂಡು ಬಂದಿದೆ ಎಂದು ಹೇಳಿದರು.ನಾಗರ ಪಂಚಮಿ ಹಬ್ಬವು ಪ್ರಕೃತಿ, ಜೀವಜಾಲ ಹಾಗೂ ನಮ್ಮ ಸಂಸ್ಕೃತಿಯೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ಸಾರುತ್ತದೆ. ಇಂತಹ ಧಾರ್ಮಿಕ ಆಚರಣೆಗಳು ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.ಈ ಸಂದರ್ಭದಲ್ಲಿ ದೇವಸ್ಥಾನಕ್ಕೆ ಆಗಮಿಸಿದ್ದ ಭಕ್ತರು ಹಾಗೂ ಮಹಿಳೆಯರು ಭಕ್ತಿಭಾವದಿಂದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಿಕಾಸ ಕೋ ಆಪ್ ಸೊಸಾಯಿಟಿಗೆ 21 ಲಕ್ಷ ಲಾಭ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ: ಪಟ್ಟಣದ ವಿಕಾಸ ಕೋ ಆಪ್ ಸೊಸೈಟಿಯು ಕೇವಲ ಐದು ವರ್ಷಗಳಲ್ಲಿ 775 ಸದಸ್ಯರೊಂದಿಗೆ ರೂ.11.83 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು ಪ್ರಸಕ್ತ ವರ್ಷದಲ್ಲಿ ರೂ. 21 ಲಕ್ಷ ಲಾಭ ಗಳಿಸಿದೆ ಎಂದು ವಿಕಾಸ ಕೋ ಆಪ್ ಸೊಸೈಟಿಯ ಅಧ್ಯಕ್ಷ ರಾಮನಗೌಡ ಬಾಗೇವಾಡಿ ಹೇಳಿದರು. ಅವರು ತಮ್ಮ ವಿಕಾಸ ಕೋ ಆಪ್ ನ ಐದನೆಯ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದರು. ಉಪಾಧ್ಯಕ್ಷ ಎಚ್. ಎಸ್.ಪಾಟೀಲ ಅವರು ಮಾತನಾಡಿ, ಸಮಾನ ಮನಸ್ಕರು ಸೇರಿ ಪ್ರಾರಂಭಿಸಿರುವ ಕೋ ಆಪ್ ಸೊಸೈಟಿಯು ಆಡಳಿತ ಮಂಡಳಿ, ಸಿಬ್ಬಂದಿ, ಹಾಗೂ ಗ್ರಾಹಕರ ಸಹಕಾರದಿಂದ ಐದು ವರ್ಷದೊಳಗೆ ಹೆಸರಿಗೆ ತಕ್ಕಂತೆ ವಿಕಾಸವಾಗುತ್ತ ನಡೆದಿದೆ ಎಂದರು.ಉಪನ್ಯಾಸಕರಾಗಿ ಬಂದಿದ್ದ ಎಸ್.ಕೆ.ಬಿಇಡಿ ಕಾಲೇಜಿನ ಉಪನ್ಯಾಸಕ ಉಮೇಶ ಮಂಗೊಂಡ ಹಾಗೂ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಬಿ.ದಮ್ಮೂರಮಠ ಮಾತನಾಡಿದರು. ತಾಳಿಕೋಟಿ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷ ಎಚ್.ಬಿ.ಬಾಗೆವಾಡಿ ಅವರು ಉದ್ಘಾಟಿಸಿದರು. ವೇದಿಕೆಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಕೋ ಆಪ್ ಸೊಸೈಟಿಯ ಅಧ್ಯಕ್ಷ ಬಿ.ಎನ್.ಹಿಪ್ಪರಗಿ ಉಪಸ್ಥಿತರಿದ್ದರು. ನಿರ್ದೇಶಕಿ ಬಿ.ಟಿ.ಸಜ್ಜನ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕಿ ಸುಜಾತಾ ಯಡ್ರಾಮಿ ವರದಿ ವಾಚಿಸಿದರು. ಜಯಶ್ರೀ ಸಜ್ಜನ ಪ್ರಾರ್ಥಿಸಿದರು. ಬಾಲಕಿ ಆರಾಧ್ಯ ಹಿರೇಮಠ ಪ್ರಸ್ತುತಪಡಿಸಿದ ಭರತನಾಟ್ಯ ಗಮನ ಸೆಳೆಯಿತು.ನಿರ್ದೇಶಕಿ ಶಿವಲೀಲಾ ಮುರಾಳ ಭಾವಗೀತೆ ಹಾಡಿದರು. ನಿರ್ದೇಶಕ ಬಿ.ಕೆ. ಯಡ್ರಾಮಿ ನಿರ್ವಹಿಸಿದರು. ಮಹಾಂತೇಶ ಮುರಾಳ ವಂದಿಸಿದರು. ಸಭೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು ಸೊಸೈಟಿಯ ಸಿಬ್ಬಂದಿ, ಇತರ ಪ್ರಮುಖರು ಉಪಸ್ಥಿತರಿದ್ದರು.

# ಯೋಧರ ಸನ್ಮಾನದೊಂದಿಗೆ ಅರ್ಥಪೂರ್ಣ 80ನೇ ಸ್ವಾತಂತ್ರ್ಯೋತ್ಸವ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ, ಆ.16: ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನಗಳನ್ನು ಸ್ಮ-ರಿಸುವ ಜೊತೆಗೆ ದೇಶಸೇವೆಯಲ್ಲಿ ತೊಡಗಿರುವ ಯೋಧರನ್ನು ಗೌರವಿಸುವ ಮೂಲಕ ತಾಲೂಕಿನ ಕೂಚಬಾಳ ಗ್ರಾಮದ ಹೊಸನಗರದಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.
ಕಾರ್ಯಕ್ರಮದ ಆರಂಭದಲ್ಲಿ ಮಹಾತ್ಮ ಗಾಂಧೀ-ಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು. ಬಳಿಕ ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಯನ್ನು ಸ್ಮರಿಸಲಾಯಿತು.ಮುಖ್ಯ ಅತಿಥಿ-ಯಾಗಿ ಭಾಗವಹಿಸಿದ್ದ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ರಾಮನಗೌಡ ಎಸ್. ಪಾಟೀಲ (ಕೂಚಬಾಳ )ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಅವರ ತ್ಯಾಗ ಮತ್ತು ದೇಶಭಕ್ತಿಯ ಆದರ್ಶಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸ್ವಾತಂತ್ರ್ಯದ ನಿಜವಾದ ಅರ್ಥ ಸಾರ್ಥಕವಾಗುತ್ತದೆ ಎಂದು ಹೇಳಿದರು.ಸ್ವಾತಂತ್ರ್ಯೋತ್ಸವದ ವಿಶೇಷ ಅಂಗವಾಗಿ ಭಾರತೀಯ ಸೇನೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮದ ಯೋಧರು ಹಾಗೂ ಇಂಜಿನಿಯರ್‌ಗಳನ್ನು ಗ್ರಾಮಸ್ಥರ ಪರವಾಗಿ ಶಾಲು ಹೊದಿಸಿ ಸನ್ಮಾನಿಸಲಾಯಿತು. ಈ ವೇಳೆ ಗ್ರಾಮಸ್ಥರು ಯೋಧರ ಸೇವೆಯನ್ನು ಕೊಂಡಾಡಿ ಅಭಿನಂದಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಲವಂತರಾಯಗೌಡ ಪಾಟೀಲ ವಹಿಸಿದ್ದರು. ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿದ್ದನಗೌಡ ಪಾಟೀಲ, ಮಾಜಿ ಸದಸ್ಯ ಪರಸಪ್ಪ ಮಾದರ, ಈ ಸಂದರ್ಭದಲ್ಲಿ.ರಾಮನಗೌಡ ಬಿರಾದಾರ, ನಾಗಪ್ಪ ಹೂಗಾರ, ಗುರಪ್ಪ ಕುಂಬಾರ, ಬಸಣ್ಣ ಮೇಟಿ,ಮುಖ್ಯೋಪಾಧ್ಯಾಯ ಎಂ.ಜಿ. ಕುನ್ನೂರ,ಮತ್ತು ಸಿಬ್ಬಂದಿಗಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ಬಿ.ಎಸ್. ಭಜಂತ್ರಿ ನಿರೂಪಿಸಿ, ನಾನಾಗೌಡ ಪಾಟೀಲ ವಂದನಾರ್ಪಣೆ ಸಲ್ಲಿಸಿದರು.

# ಉರ್ದು ಮಾಧ್ಯಮ ಶಿಕ್ಷಕರಿಗೆ ನ್ಯಾಯಕ್ಕಾಗಿ ಮನವಿ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು : ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು ತಾಲೂಕು ಘಟಕ ಸಿಂಧನೂರು ವತಿಯಿಂದ ಉರ್ದು ಮಾಧ್ಯಮ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಿ, ಶಿಕ್ಷಕರಿಗೆ ನ್ಯಾಯಯುತ ಅವಕಾಶ ಮತ್ತು ಸಮಾನ ಹಕ್ಕುಗಳನ್ನು ಕಲ್ಪಿಸುವಂತೆ ಮನವಿ ಪತ್ರ ಸಲ್ಲಿಸಲಾಯಿತು.ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಉರ್ದು ಮಾಧ್ಯಮದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ, ಅವರ ಶೈಕ್ಷಣಿಕ ಅರ್ಹತೆ ಹಾಗೂ ಮಾಧ್ಯಮದ ಅಗತ್ಯತೆಗಳನ್ನು ಪರಿಗಣಿಸಿ ಸೂಕ್ತ ಅವಕಾಶ ಕಲ್ಪಿಸಬೇಕು ಎಂದು ಸಂಘದ ವತಿಯಿಂದ ಮನವಿ ಮಾಡಲಾಯಿತು.ಉರ್ದು ಮಾಧ್ಯಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಮುಂದುವರಿಸಲು ಅರ್ಹ ಶಿಕ್ಷಕರ ನೇಮಕಾತಿ ಅತ್ಯಂತ ಅಗತ್ಯವಾಗಿದೆ. ಹೀಗಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ಉರ್ದು ಮಾಧ್ಯಮದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿ ಹಾಗೂ ಶಿಕ್ಷಕರ ವೃತ್ತಿ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.ಮಾನ್ಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಅವರ ಅನುಪಸ್ಥಿತಿಯಲ್ಲಿ, ಅವರ ಪರವಾಗಿ ಶ್ರೀ ಪಂಪನಗೌಡ ಬಾದರ್ಲಿ, ನಿರ್ದೇಶಕರು, RDCC ಬ್ಯಾಂಕ್ ಅವರು ಮನವಿ ಪತ್ರವನ್ನು ಸ್ವೀಕರಿಸಿದರು.ಮನವಿಯನ್ನು ಸ್ವೀಕರಿಸಿದ ಅವರು, ಉರ್ದು ಮಾಧ್ಯಮ ಶಿಕ್ಷಕರ ಸಮಸ್ಯೆಯನ್ನು ಸಂಬಂಧಪಟ್ಟವರ ಗಮನಕ್ಕೆ ತಂದು, ಶಿಕ್ಷಕರ ಹಕ್ಕು ಮತ್ತು ಅವಕಾಶಗಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.ನಮ್ಮ ಪ್ರಮುಖ ಬೇಡಿಕೆಗಳುಉ–ರ್ದು ಮಾಧ್ಯಮ ಶಿಕ್ಷಕರಿಗೆ ನೇಮಕಾತಿಯಲ್ಲಿ ನ್ಯಾಯಯುತ ಅವಕಾಶ ಕಲ್ಪಿಸಬೇಕು.ನೇಮಕಾತಿ ಅಧಿಸೂಚನೆಯಲ್ಲಿರುವ ಗೊಂದಲಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿ ಮಾಡಬೇಕು. ಉರ್ದು ಮಾಧ್ಯಮ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನು ಕಾಪಾಡಬೇಕು. ಅರ್ಹ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಪಾರದರ್ಶಕ ನೇಮಕಾತಿ ಪ್ರಕ್ರಿಯೆ ಅನುಸರಿಸಬೇಕು.ಉರ್ದು ಮಾಧ್ಯಮ ಶಾಲೆಗಳಲ್ಲಿ ಅಗತ್ಯವಿರುವ ಶಿಕ್ಷಕರ ಹುದ್ದೆಗಳನ್ನು ಸಮರ್ಪಕವಾಗಿ ಭರ್ತಿ ಮಾಡಬೇಕು.ಒಬ್ಬ ಶಿಕ್ಷಕನಿಗೆ ನ್ಯಾಯ ದೊರೆತರೆ, ನೂರಾರು ವಿದ್ಯಾರ್ಥಿಗಳ ಭವಿಷ್ಯಕ್ಕೆ ಬಲ ಸಿಗುತ್ತದೆ. ಉರ್ದು ಮಾಧ್ಯಮ ಶಿಕ್ಷಕರ ಹಕ್ಕುಗಳ ರಕ್ಷಣೆಗಾಗಿ ಸಲ್ಲಿಸಿರುವ ಮನವಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ, ಶೀಘ್ರದಲ್ಲೇ ನ್ಯಾಯಯುತ ಪರಿಹಾರ ಕಲ್ಪಿಸಲಿ ಎಂಬುದು ಸಂಘದ ಆಶಯವಾಗಿದೆ.

# ಪ್ರತಿಯೊಬ್ಬರಲ್ಲೂ ಪರಿಸರ ಪ್ರಜ್ಞೆ ಇರಲಿ

❑ ನೈಜ್ಯ ದೆಸೆ ನ್ಯೂಸ್




ಕುಷ್ಟಗಿ: ಇಲ್ಲಿನ ಗಾಂಧಿನಗರ ಕಿರಿಯ ಪ್ರಾಥ-'ಮಿಕ ಶಾಲೆಯಲ್ಲಿ ಸಸಿ ನೆಡುವ ಮೂಲಕ ಅರ್ಥಪೂರ್ಣ ಪರಿಸರ ಕಾರ್ಯಕ್ರಮ ಆಚ-ರಿಸಲಾಯಿತು.ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಪರಿಸರ ಪ್ರೇಮಿ ಜಡಿಯಪ್ಪ ಹರ್ಲಾಪುರ ಅವರು ಕುಟುಂಬ ಸಮೇತರಾಗಿ ಸ್ವತಃ ಐದು ತೆಂಗಿನ ಸಸಿಗಳನ್ನು ಶಾಲೆಗೆ ತಂದು, ಶಾಲಾ ಅಂಗಳದಲ್ಲಿ ತಾವೇ ತಗ್ಗು ತೆಗೆದು ಶಾಲಾ ಮಕ್ಕಳೊಂದಿಗೆ ಸಸಿಗಳನ್ನು ನಾಟಿ ಮಾಡಿದರು.ಈ ಸಂದರ್ಭದಲ್ಲಿ ಶಿಕ್ಷಕಿ ಜಹಾನ್ ಆರಾ ಮಾತನಾಡಿ, “ಪರಿಸರ ಪ್ರಜ್ಞೆ ಪ್ರತಿಯೊಬ್ಬರಲ್ಲೂ ಇರಬೇಕು. ಇಂದು ನಾವು ಕೇವಲ ಮಣ್ಣಿನಲ್ಲಿ ಸಸಿಗಳನ್ನು ನೆಡುತ್ತಿಲ್ಲ; ಬದಲಾಗಿ ನಮ್ಮ ಭವಿಷ್ಯವನ್ನು ಬಿತ್ತುತ್ತಿದ್ದೇವೆ. ಪ್ರಕೃತಿ ನಮಗೆ ಶುದ್ಧ ಗಾಳಿ, ನೀರು ಹಾಗೂ ನೆರಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ನೀಡುತ್ತಿದೆ. ಮಕ್ಕಳು ಸಸಿಗಳನ್ನು ನೆಡುವುದರ ಜೊತೆಗೆ ಅವುಗಳನ್ನು ಮಕ್ಕಳಂತೆ ಪ್ರೀತಿಯಿಂದ ಪೋಷಿಸುವ ಜವಾಬ್ದಾರಿಯನ್ನೂ ವಹಿಸಿಕೊಳ್ಳಬೇಕು” ಎಂದರು.ಮುಖ್ಯ ಶಿಕ್ಷಕಿ ಅನ್ನಪೂರ್ಣ ತಾಳಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, “ಪರಿಸರ ಸಂರಕ್ಷಣೆ ಕೇವಲ ಒಂದು ದಿನದ ಆಚರಣೆಯಾಗಬಾರದು. ಅದು ನಮ್ಮ ದಿನನಿತ್ಯದ ಜೀವನದ ಭಾಗವಾಗಬೇಕು. ಯಾವುದೇ ಆಹ್ವಾನವಿಲ್ಲದೆ ಸ್ವಯಂಪ್ರೇರಿತರಾಗಿ ಶಾಲೆಗೆ ಆಗಮಿಸಿ ತೆಂಗಿನ ಸಸಿಗಳನ್ನು ನೀಡಿ, ತಾವೇ ತಗ್ಗು ತೆಗೆದು ಸಸಿ ನೆಟ್ಟು ಮಾದರಿಯಾಗಿರುವ ಜಡಿಯಪ್ಪ ಹರ್ಲಾಪುರ ಅವರ ಸಮಾಜಮುಖಿ ಕಾರ್ಯ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ” ಎಂದು ಹೇಳಿದರು.“ಗಿಡಗಳು ನಮ್ಮ ಭೂಮಿಯ ಉಸಿರು. ಇಂದಿನ ಮಕ್ಕಳು ನಾಳಿನ ಪ್ರಜೆಗಳು. ಪ್ರಕೃತಿಯನ್ನು ರಕ್ಷಿಸುವ ಹಾಗೂ ಮರಗಿಡಗಳನ್ನು ಬೆಳೆಸುವ ಸಂಕಲ್ಪವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಮಾಡಬೇಕು” ಎಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

## ನೇಮಕಾತಿ ಪ್ರಕಟಣೆ

ಮೈಸೂರು ಕೃಷಿ ಇಲಾಖೆ ನೇಮಕಾತಿ 2026 – 12 ತಾಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ 10 ಆಗಸ್ಟ್ 2026ಮೈಸೂರು ಕೃಷಿ ಇಲಾಖೆ ನೇಮಕಾತಿ 2026: 12 ತಾಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಮೈಸೂರು ಕೃಷಿ ಇಲಾಖೆಯು ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ತಾಲೂಕು ತಾಂತ್ರಿಕ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮೈಸೂ–ರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಆಗಸ್ಟ್–2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: raitamitra.karna-taka.gov.in

### ಜಾಲಹಳ್ಳಿ ಕರ್ನಾಟಕ ಎಣ್ಣೆ ಬೀಜ ಸಹಕಾರಿ ಸಂಘ (ಕೆಓಎಫ್ )ದಲ್ಲಿ ಅದ್ದೂರಿ 80ನೇ ಸ್ವಾತಂತ್ರ್ಯ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್



ದೇವದುರ್ಗ/ಜಾಲಹಳ್ಳಿ: ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಕರ್ನಾಟಕ ಎಣ್ಣೆ ಬೀಜ ಸಹಕಾರಿ ಸಂಘದ (ಕೆಓಎಫ್) ಕಚೇರಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರ ಸಂಘದ ಅಧ್ಯಕ್ಷರಾದ ಹುಸೇನಪ್ಪ ಗುತ್ತೇದಾರ್ ಅವರು ಧ್ವಜಾರೋಹಣ ನೆರವೇ–ರಿಸಿದರು. ಬಳಿಕ ಶಾಲಾ ಮಕ್ಕಳು ರಾಷ್ಟ್ರಗೀತೆಯನ್ನು ಹಾಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಜಾಲಹಳ್ಳಿ ಕೆಓಎಫ್ ಸಹಕಾರ ಸಂಘದ ಅಧ್ಯಕ್ಷ ಹುಸೇನಪ್ಪ ಗುತ್ತೇದಾರ್ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನಗಳನ್ನು ಸ್ಮರಿಸಿದರು. ದೇಶದ ಏಕತೆ, ಸಾಮಾಜಿಕ ನ್ಯಾಯ, ಸೌಹಾರ್ದತೆ ಹಾಗೂ ಅಭಿವೃದ್ಧಿಗಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ನರಸಿಂಗ ಹೊಸೂರು, ನಾರಾಯಣ ಯರಗುಡ್ಡ, ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

### ಮಸ್ಕಿಯಲ್ಲಿ ಶರಣ ಶಂಕರದಾಸಿಮಯ್ಯ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್



ಮಸ್ಕಿ: ಪಟ್ಟಣದಲ್ಲಿರುವ ಜಡೆಯ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ನಾಗಲೀಕ ಸಿಂಪಿ ಸಮಾಜದ ಕುಲಗುರು ಶ್ರೀ ಶರಣ ಶಂಕರದಾಸಿಮಯ್ಯನವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.ಸಮಾಜದ ಉಪಾಧ್ಯಕ್ಷ ಮಲ್ಲಿಕಾರ್ಜುನ ಕಂದ್ಗಲ ಅವರು ಶರಣ ಶಂಕರದಾಸಿಮಯ್ಯನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು.ನಂತರ ಮಾತನಾಡಿದ ಅವರು, ಶರಣ ಶಂಕರದಾಸಿಮಯ್ಯನವರು ಶಿವನ ಅವತಾರವೆಂದು ಪುರಾಣಗಳಲ್ಲಿ ಉಲ್ಲೇಖವಾಗಿದ್ದು, ಪಾರ್ವತಿ ದೇವಿಯ ತುಂಡಾದ ಬಟ್ಟೆಯನ್ನು ಸರಿಪಡಿಸಿ ಆಕೆಯ ಮನ ಸಂತೋಷಪಡಿಸಿದರೆಂಬ ಪ್ರತೀತಿ ಇದೆ. ಅವರು ನಾಗಲೀಕ ಸಿಂಪಿ ಸಮಾಜದ ಮೂಲಪುರುಷರಾಗಿ ಸಮಾಜದ ಉನ್ನತಿಗೆ ಶ್ರಮಿಸಿದವರು ಎಂದರು.ಶ್ರಾವಣ ಮಾಸದ ಮೊದಲ ಸೋಮವಾರದ ಅಂಗವಾಗಿ ಶ್ರೀ ಜಡೆಯ ಶಂಕರಲಿಂಗ ದೇವರಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ನಾಮಾವಳಿ ಕಾರ್ಯಕ್ರಮಗಳು ನೆರವೇರಿದವು. ನಂತರ ಬಳಗಾನೂರು ರಸ್ತೆಯಲ್ಲಿರುವ ಶರಣ ಶಂಕರದಾಸಿಮಯ್ಯನವರ ವೃತ್ತಕ್ಕೆ ಸಮಾಜದ ಕಾರ್ಯದರ್ಶಿ ಶ್ರೀಧರ ಮಸ್ಕಿ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಾಗಲೀಕ ಸಿಂಪಿ ಸಮಾಜದವರು ತಮ್ಮ ಕುಲಕಸುಬಾದ ಟೇಲರಿಂಗ್ ವೃತ್ತಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ಶರಣ ಶಂಕರದಾಸಿಮಯ್ಯನವರ ವೃತ್ತ ನಿರ್ಮಿಸಿರುವ ಹೆಗ್ಗಳಿಕೆ ಮಸ್ಕಿಯ ಸಮಾಜದ ಬಾಂಧವರಿಗೆ ಸಲ್ಲುತ್ತದೆ ಎಂದರು. ಕಲ್ಲುಭಾವಿ ಕಟ್ಟೆ ಸುತ್ತಮುತ್ತ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಹಿನ್ನೆಲೆಯಲ್ಲಿ ಈಶ್ವರ ದೇವಸ್ಥಾನದ ಬಳಿ 'ಸಿಂಪಿ ಬಡಾವಣೆ' ನಾಮಫಲಕವನ್ನು ಸಮಾಜದ ಉಪಾಧ್ಯಕ್ಷ ಮಲ್ಲಿಕಾರ್ಜುನ ಕಂದ್ಗಲ ಅನಾವರಣಗೊಳಿಸಿದರು.ಸಮಾಜದ ಹಿರಿಯರಾದ ವೀರಭದ್ರಪ್ಪ ಧನಶೆಟ್ಟಿ, ಶಂಕರಲಿಂಗಪ್ಪ ಧನಶೆಟ್ಟಿ, ಶರಣಬಸವ ಎನ್. ಜಡೆ, ವೀರೇಶ ಬುಳ್ಳಾ, ವೀರೇಶ ಆನೆಹೊಸೂರು, ಶರಣಪ್ಪ ಅನ್ವರಿ, ವೀರೇಶಪ್ಪ ಲಿಂಗಸುಗೂರು, ಸೂಗೂರಪ್ಪ ಸರಸೂರ, ವಿಶ್ವನಾಥ ಹರಸೂರ, ಶ್ರೀಶೈಲ ಗೊಡಸಲಹಳ್ಳಿ, ಅಮರೇಶ ಅನ್ವರಿ, ಶಿವಪುತ್ರ ಕಾರಮಂಗಿ, ಅಮರ ಗುಡಗುಂಟಿ, ಸಂಪತ್ ಗಿರಣಿ, ಸೂರ್ಯಕಾಂತ ಧನಶೆಟ್ಟಿ ಸೇರಿದಂತೆ ಸಮಾಜದ ಬಾಂಧವರು ಪಾಲ್ಗೊಂಡಿದ್ದರು.

# ಮದ್ದಾನೇಶ್ವರ ಮಠದಲ್ಲಿ ಭಕ್ತಿಭಾವದಿಂದ ನಾಗರ ಪಂಚಮಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ನಗರದ ಶ್ರೀ ಮದ್ದಾನೇಶ್ವರ ಮಠದ ದೇವಸ್ಥಾನದಲ್ಲಿ ನಾಗರ ಪಂಚಮಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳೆಯರು ನಾಗಪ್ಪನಿಗೆ ಹಾಲು ಎರೆಯುವ ಮೂಲಕ ವಿಶೇಷ ಪೂಜೆ ಸಲ್ಲಿಸಿ, ನಾಗದೇವತೆಯ ಕೃಪೆಗೆ ಪಾತ್ರರಾಗಲು ಪ್ರಾರ್ಥಿಸಿದರು.ಇದೇ ಸಂದರ್ಭದಲ್ಲಿ ಮದ್ದಾನೇಶ್ವರ ಶ್ರೀಗಳು ಮಾತನಾಡಿ, ಶ್ರಾವಣ ಮಾಸದ ನಾಗರ ಪಂಚಮಿ ಅತ್ಯಂತ ಪವಿತ್ರವಾದ ದಿನವಾಗಿದ್ದು, ಭಕ್ತಿ, ನಂಬಿಕೆ



ಹಾಗೂ ನಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಪ್ರತಿಬಿಂಬಿಸುತ್ತದೆ. ಹಿಂದೂ ಧರ್ಮದಲ್ಲಿ ನಾಗರ ಪಂಚಮಿಗೆ ವಿಶೇಷ ಪ್ರಾಮುಖ್ಯತೆ ಇದ್ದು, ನಾಗದೇವತೆಯನ್ನು ಆರಾಧಿಸುವ ಮೂಲಕ ಕುಟುಂಬದ ಸುಖ–ಶಾಂತಿ, ಆರೋಗ್ಯ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸುವುದು ವಾಡಿಕೆಯಾಗಿದೆ ಎಂದರು.ಮಾಜಿ ಸೈನಿಕರಾದ ಶಿವಾಜಿ ಹಡಪದ ಮಾತನಾಡಿ, ನಾಗರ ಪಂಚಮಿ ದಿನದಂದು ನಾಗದೇವತೆಗೆ ಹಾಲು, ಅರಿಶಿನ, ಕುಂಕುಮ ಹಾಗೂ ಮಂಡಕ್ಕಿ (ಪುರಿ) ಅಥವಾ ತಂಬಿಟ್ಟಿನ ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುವ ಪದ್ಧತಿ ತಲೆತಲಾಂತರಗಳಿಂದ ನಡೆದುಕೊಂಡು ಬಂದಿದೆ. ಇಂತಹ ಆಚರಣೆಗಳು ನಮ್ಮ ಧಾರ್ಮಿಕ ನಂಬಿಕೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮಠಕ್ಕೆ ಆಗಮಿಸಿದ್ದ ಮಹಿಳೆಯರು ಹಾಗೂ ಭಕ್ತರು ಭಕ್ತಿಭಾವದಿಂದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನಿಂಗಪ್ಪ ಜಿಗೇರಿ ಸಹಾಯ ಹಸ್ತ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ:ಕಡೆಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದಿವಂಗತ ಮಲ್ಲಪ್ಪ ಜಿಗೇರಿ ಹಾಗೂ ಗಂಗಮ್ಮ ಜಿಗೇರಿ ಅವರ ಸ್ಮರಣಾರ್ಥ, ಅವರ ಮೊಮ್ಮಗ ನಿಂಗಪ್ಪ ವಿ. ಜಿಗೇರಿ ಅವರು ಐದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಿ ಸಹಾಯ ಹಸ್ತ ಚಾಚಿದರು.ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಕಾಪಿ, ಪೆನ್ನು ಸೇರಿದಂತೆ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ವಿತ–ರಿಸಲಾಯಿತು.ಶೈಕ್ಷಣಿಕ ಸಾಮಗ್ರಿಗಳನ್ನು ಪಡೆದ ವಿದ್ಯಾರ್ಥಿಗಳಲ್ಲಿ



4ನೇ ತರಗತಿಯ ಸಾನಿಧ್ಯ ಶಂಭುಲಿಂಗಯ್ಯ ನಿಡಗುಂದಿಮಠ, 5ನೇ ತರಗತಿಯ ಪ್ರಜ್ವಲ ನೀಲಪ್ಪ ಚವ್ಹಾಣ, 6ನೇ ತರಗತಿಯ ರೇಣುಕಾ ಹನಮಂತ ಹೊಸಮನಿ, 7ನೇ ತರಗತಿಯ ಕಿರಣ ಕುಮಾರ ಬಸವರಾಜ ಯಲಬುರ್ತಿ ಹಾಗೂ 8ನೇ ತರಗತಿಯ ಪ್ರಿಯಾಂಕ ಚನ್ನಬಸಯ್ಯ ನಿಡಗುಂದಿಮಠ ಇದ್ದರು.ಈ ಸಂದರ್ಭದಲ್ಲಿ ಮಾತನಾಡಿದ ನಿಂಗಪ್ಪ ವಿ. ಜಿಗೇರಿ, ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು ಸಮಾಜದ ಜವಾಬ್ದಾರಿಯಾಗಿದೆ. ವಿದ್ಯಾರ್ಥಿಗಳು ನೀಡಿರುವ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ಭವಿಷ್ಯದಲ್ಲಿ ಸಾಧನೆ ಮಾಡಬೇಕು ಎಂದು ಹಾರೈಸಿದರು.ಶಾಲೆಯ ಮುಖ್ಯ ಗುರುಗಳು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಿಂಗಪ್ಪ ಜಿಗೇರಿ ಅವರ ಸಮಾಜಮುಖಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಕೃತಜ್ಞತೆ ಸಲ್ಲಿಸಿದರು.

# ಜಾಲಹಳ್ಳಿಯಲ್ಲಿ ತಾಲೂಕು ಜೆಡಿಎಸ್ ನೂತನ ಪದಾಧಿಕಾರಿಗಳಿಗೆ ಕುಮಾರಿ ಗೌರಿ ಜೆ. ನಾಯಕ್ ಅವರಿಂದ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪ್ರವಾಸಿ ಮಂದಿರದಲ್ತಾಲೂಕು ಜೆಡಿಎಸ್‌ನ ವಿವಿಧ ಘಟಕಗಳಿಗೆ ನೂತನವಾಗಿ ನೇಮಕಗೊಂಡ ಪದಾಧಿಕಾರಿಗಳ ಸನ್ಮಾನ ಸಮಾರಂಭವು ನಡೆಯಿತು.ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಜೆಡಿಎಸ್‌ನ ನೂತನ ಮಾಧ್ಯಮ ವಿಭಾಗದ ವಕ್ತಾರರಾಗಿ ನೇಮಕಗೊಂಡಿರುವ, ದೇವದುರ್ಗದ ಶಾಸಕಿ ಕರಿಯಮ್ಮ ಜಿ. ನಾಯಕ್ ಅವರ ಸುಪುತ್ರಿಯಾದ ಕುಮಾರಿ ಗೌರಿ ಜಿ. ನಾಯಕ್ ವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಜಾಲಹಳ್ಳಿ ವಿಭಾಗದ ಜೆಡಿಎಸ್ ಮುಖಂಡರು ಕುಮಾರಿ ಗೌರಿ ಜಿ. ನಾಯಕ್ ಅವರನ್ನು ಸನ್ಮಾನಿಸಿದರು. ಬಳಿಕ ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ತಾಲೂಕು ಜೆಡಿಎಸ್‌ನ ವಿವಿಧ ಘಟಕಗಳಿಗೆ ನೇಮಕಗೊಂಡ ಪದಾಧಿಕಾರಿಗಳನ್ನು ಕುಮಾರಿ ಗೌರಿ ಜಿ. ನಾಯಕ್ ಅವರು ಸನ್ಮಾನಿಸಿದರು.ದೇವದುರ್ಗ ತಾಲೂಕಿನ ಶಾಸಕಿ ಕರಿಯಮ್ಮ ಜಿ. ನಾಯಕ್ ಅವರ ಶಿಫಾರಸ್ಸಿನ ಮೇರೆಗೆ ವಿವಿಧ ಘಟಕಗಳಿಗೆ ನೇಮಕಗೊಂಡಿರುವ ಪದಾಧಿಕಾರಿಗಳಲ್ಲಿ:– ತಾಲೂಕು ಜೆಡಿಎಸ್ ಘಟಕದ ನೂತನ ಪ್ರಧಾನ ಕಾರ್ಯದರ್ಶಿ: ಗೋವಿಂದರಾಜ್ ತಿಂಪುರ್– ತಾಲೂಕು ಅಲ್ಪಸಂಖ್ಯಾತರ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ: ಮಕ್ತುಮ್ ಜಾಲಹಳ್ಳಿ– ತಾಲೂಕು ಜೆಡಿಎಸ್ ಎಸ್‌ಟಿ ಮೋರ್ಚಾ ಘಟಕದ ಅಧ್ಯಕ್ಷರು: ಶಿವನಗೌಡ ಜಾಲಹಳ್ಳಿ– ತಾಲೂಕು ಎಸ್‌ಟಿ ಜೆಡಿಎಸ್ ಮೋರ್ಚಾ ಘಟಕದ ಪ್ರಧಾನ ಕಾರ್ಯದರ್ಶಿ: ರಂಗಪ್ಪ ಕಾವಲಿ, ಎಚ್. ಸಿದ್ದಾಪುರ– ತಾಲೂಕು ಜೆಡಿಎಸ್ ಎಸ್‌ಟಿ ಮೋರ್ಚಾ ಕಾರ್ಯದರ್ಶಿ: ಗುರು ತೋಟದ– ತಾಲೂಕು ಜೆಡಿಎಸ್ ಘಟಕದ ಸದಸ್ಯರು: ಅಕ್ಕಮ್ಮ ಸೌದ್ರಿ– ತಾಲೂಕು ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರು: ಬಸವರಾಜ್



ತೋಟದಮನೆ, ಚಿಂಚೋಡಿ2028ರ ಚುನಾವಣೆಯಲ್ಲಿ ಜೆಡಿಎಸ್ ಗೆಲುವಿಗೆ ಒಗ್ಗಟ್ಟಾಗಿ ಶ್ರಮಿಸಲು ಕರೆಸಮಾರಂಭದಲ್ಲಿ ಮಾತನಾಡಿದ ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ತಿಪ್ಪೂರ್, 2028ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಿ ಗೆಲುವಿನತ್ತ ಕೊಂಡೊಯ್ಯಲು ಪ್ರತಿಯೊಬ್ಬ ಕಾರ್ಯಕರ್ತರು ಹಾಗೂ ಮುಖಂಡರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು.ದೇವದುರ್ಗ ತಾಲೂಕಿನ ಪ್ರತಿಯೊಂದು ಗ್ರಾಮಕ್ಕೂ ಶಾಸಕಿ ಕರಿಯಮ್ಮ ಜಿ. ನಾಯಕ್ ಅವರು ಕೆಲಸ ಮಾಡಿರುವುದು ಪಕ್ಷದ ಸಾಧನೆಯಾಗಿದೆ ಎಂದು ಅವರು ಹೇಳಿದರು. ಪಕ್ಷದೊಳಗಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎಲ್ಲರೂ ಒಗ್ಗಟ್ಟಿನಿಂದ ಪಕ್ಷ ಸಂಘಟನೆಗೆ ಶ್ರಮಿಸಬೇಕು ಎಂದು ತಿಳಿಸಿದರು.ವಿಕಾರ್ಯಕರ್ತರಿಗೆ ಜವಾಬ್ದಾರಿಯಿಂದ ಕೆಲಸ ಮಾಡುವಂತೆ ಗೌರಿ ಜಿ. ನಾಯಕ್ ಕರೆಹಿರಾಜ್ಯ ಜೆಡಿಎಸ್‌ನ ನೂತನ ಮಾಧ್ಯಮ ವಿಭಾಗದ ವಕ್ತಾರರಾದ ಕುಮಾರಿ ಗೌರಿ ಜಿ. ನಾಯಕ್ ಮಾತನಾಡಿ, ಈ ಹಿಂದೆ ವಿಧಾನಸಭಾ ಚುನಾವಣೆಯ ಪ್ರಚಾರಕ್ಕಾಗಿ ಜಾಲಹಳ್ಳಿಗೆ ಆಗಮಿಸಿದ್ದ ಸಂದರ್ಭದಲ್ಲಿ ತಮಗೆ ಹಾಗೂ ತಮ್ಮ ತಾಯಿಯವರಾದ ಶಾಸಕಿ ಕರಿಯಮ್ಮ ಜಿ. ನಾಯಕ್ ಅವ–ರಿಗೆ ಸ್ಥಳೀಯರು ನೀಡಿದ ಬೆಂಬಲ ಮತ್ತು ಸ್ವಾಗತವನ್ನು ಸ್ಮರಿಸಿ ಧನ್ಯವಾದ ಸಲ್ಲಿಸಿದರು.ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ವಿವಿಧ ತಾಲೂಕು ಜೆಡಿಎಸ್ ಘಟಕಗಳಿಗೆ ನೇಮಕ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ನೂತನ ಜವಾಬ್ದಾರಿಗಳನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಿ ಪಕ್ಷ ಸಂಘಟನೆಗೆ ಶ್ರಮಿಸಬೇಕು ಎಂದು ಹೇಳಿದರು.ತಾಲೂಕು ಜೆಡಿಎಸ್ ಘಟಕದಲ್ಲಿ ಇನ್ನೂ ಹಲವು ನೇಮಕಾತಿಗಳು ಬಾಕಿ ಇದ್ದು, ಪಕ್ಷಕ್ಕಾಗಿ ದುಡಿಯುತ್ತಿರುವ ಎಲ್ಲ ಕಾರ್ಯಕರ್ತರನ್ನು ಪರಿಗಣಿಸಿ ಮುಂದಿನ ದಿನಗಳಲ್ಲಿ ಸೂಕ್ತ ಜವಾಬ್ದಾರಿಗಳನ್ನು ನೀಡಲಾಗುವುದು ಎಂದು ಗೌರಿ ಜಿ. ನಾಯಕ್ ತಿಳಿಸಿದರು.ವಿರಂಗನಾಥ್ ಮುರಾಳ್ ಹುಟ್ಟುಹಬ್ಬ ಆಚರಣೆಹಿಇದೇ ಸಂದರ್ಭದಲ್ಲಿ ಜೆಡಿಎಸ್ ಕಾರ್ಯಕರ್ತ ರಂಗನಾಥ್ ಮುರಾಳ್ ಅವರ ಹುಟ್ಟುಹಬ್ಬವನ್ನು ಜೆಡಿಎಸ್ ಅಭಿಮಾನಿಗಳು ಆಚರಿಸಿದರು. ಕುಮಾರಿ ಗೌರಿ ಜಿ. ನಾಯಕ್ ಅವರು ರಂಗನಾಥ್ ಮುರಾಳ್ ಅವರನ್ನು ಸನ್ಮಾನಿಸಿ ಹುಟ್ಟುಹಬ್ಬದ ಶುಭಾಶಯಗಳನ್ನು ಕೋ–ರಿದರು.ಈ ಸಂದರ್ಭದಲ್ಲಿ ಮಾತನಾಡಿದ ರಂಗನಾಥ್ ಮುರಾಳ್, ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ ಎಲ್ಲ ಜೆಡಿ–ಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು.ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡರಾದ ಶಿವಪ್ಪ ಫೋಟೋ ಸ್ಟುಡಿಯೋ, ರಂಗನಾಥ್ ಮುರಾಳ್, ತಿಮ್ಮಣ್ಣ ಗ್ಯಾರೇಜ್, ರಾಜು, ಮಲ್ಲೂ ಚಿಂತಲಕುಂಟಿ, ಅಂಬ್ರೇಶ, ಶಿವನಗೌಡ, ರಂಗನಾಥ್ ಹೊಸುರ, ರಂಗನಾಥ್ ಟ್ಯಾಪ್ಲಿ, ರಂಗಣ್ಣ (ಖಆಒಅ ಅಧ್ಯಕ್ಷ), ಮೋನೇಶ ಹೊಸೂರ್, ರಂಗಣ್ಣ ಪರ್ಸಿ, ರವಿ ಪರ್ಸಿ, ವೆಂಕಟೇಶ ಹಾಗೂ ರಂಗನಾಥ್ ಗುಂಡಗುರ್ತಿ ಸೇರಿದಂತೆ ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ದೇವದುರ್ಗ ತಾಲೂಕು ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಮಕತುಮ್ ಜಾಲಹಳ್ಳಿ ನೇಮಕ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ಜೆಡಿಎಸ್ ಪಕ್ಷದ ದೇವದುರ್ಗ ತಾಲೂಕು ಅಲ್ಪಸಂಖ್ಯಾತರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಮಕತುಮ್ ಜಾಲಹಳ್ಳಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.ಈ ಕುರಿತು ದೇವದುರ್ಗ ತಾಲೂಕು ಜನತಾದಳ (ಜಾತ್ಯತೀತ) ಅಧ್ಯಕ್ಷರಾದ ಬಸನಗೌಡ ದೇಸಾಯಿ ಅವರು ಅಧಿಕೃತ ನೇಮಕಾತಿ ಆದೇಶ ಪತ್ರ ಹೊರಡಿಸಿದ್ದಾರೆ. ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ತತ್ವ□ಸಿದ್ಧಾಂತಗಳನ್ನು ಒಪ್ಪಿ, ದೇವದುರ್ಗ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ರಾಜ್ಯ ಕೋರ್ ಕಮಿಟಿ ಸದಸ್ಯರಾದ ಶ್ರೀಮತಿ ಕರೇಮ್ಮ ಜಿ. ನಾಯಕ್ ಅವರ ಶಿಫಾರಸ್ಸಿನ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ತಿಳಿಸಲಾಗಿದೆ.ಪಕ್ಷದಲ್ಲಿ ಸಕ್ರಿಯವಾಗಿ



ಗುರುತಿಸಿಕೊಂಡಿರುವ ಮಕತುಮ್ ಜಾಲಹಳ್ಳಿ ಅವರು ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ದೇವದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಶ್ರಮಿಸುವುದರ ಜೊತೆಗೆ ಅಲ್ಪಸಂಖ್ಯಾತ ಸಮುದಾಯದ ಏಳಿಗೆಗಾಗಿ ನಿಷ್ಠೆಯಿಂದ ಕಾರ್ಯನಿರ್ವಹಿಸಲಿದ್ದಾರೆ ಎಂದು ತಾಲೂಕು ಜೆಡಿ–ಎಸ್ ಘಟಕ ಭರವಸೆ ವ್ಯಕ್ತಪಡಿಸಿದೆ.ನೂತನ ಜವಾಬ್ದಾರಿ ದೊರೆತ ಹಿನ್ನೆಲೆಯಲ್ಲಿ ನೈಜದಶ ಕನ್ನಡ ದಿನಪತ್ರಿಕೆಯ ವರದಿಗಾರರೊಂದಿಗೆ ಮಾತನಾಡಿದ ಮಕತುಮ್ ಜಾಲಹಳ್ಳಿ ಅವರು, "ನನ್ನನ್ನು ತಾಲೂಕು ಅಲ್ಪಸಂಖ್ಯಾತರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲು ಕಾರಣರಾದ ಜನಪ್ರಿಯ ಶಾಸಕರಾದ ಕರೇಮ್ಮ ಜಿ. ನಾಯಕ್ ಹಾಗೂ ಪಕ್ಷದ ಹಿರಿಯ ಮುಖಂಡ–ರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿದ ಎಲ್ಲರಿಗೂ ಧನ್ಯವಾದಗಳು. ಪಕ್ಷದ ಸಂಘಟನೆ ಬಲಪಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ" ಎಂದು ಹೇಳಿದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಸಿಂಧನೂರಿನ ಹಿರೇ ಹಳ್ಳದಲ್ಲಿ ಆಕ್ರಮ ಗಣಿಗಾರಿಕೆ ತಡೆಗಟ್ಟುವಂತೆ ರೈತ ಸಂಘ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಆ 18 – ಸಿಂಧನೂರು ನಗರದ ಹೃದಯ ಭಾಗದಲ್ಲಿರುವ ಹಿರೇ ಹಳ್ಳದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಭೂ ಸಂಪತ್ತನ್ನು ಅಕ್ರಮವಾಗಿ ಲೂಟಿ ಮಾಡುತ್ತಿದ್ದಾರೆಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ್ ಗೋಡಿಹಾಳ ಸಹಾಯಕ ಆಯುಕ್ತ ಬಸವಣೆಪ್ಪಾ ಕಳಶೆಟ್ಟಿ ಇವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು ಭೂ ಗರ್ಭದಲ್ಲಿರುವ ಯಾವುದೇ ಸಂಪತ್ತನ್ನು ತೆಗೆಯಲು ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಪರವಾನಿಗೆ ಪಡೆದುಕೊಂಡು ಇತ್ತಿಷ್ಟೇ ಪ್ರದೇಶದಲ್ಲಿ ಗಣಿಗಾರಿಕೆ ಮಾಡುತ್ತಿದ್ದೇವೆ ಎಂದು ರಾಜಸ್ವ ಕಟ್ಟಿ ಗಣಿಗಾರಿಕೆ ಮಾಡಬೇಕು. ಆದರೆ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಆಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾರೆ. ಈ ಬಗ್ಗೆ ಸುತ್ತಮುತ್ತಲಿನ ಸಾರ್ವಜನಿಕರು ತಹಶೀಲ್ದಾರರ ಗಮನಕ್ಕೆ ತಂದರೆ ಇದು ಸರ್ಕಾರದ ಕೆಲಸ ಇದರ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಬೇಡಿ ಎಂದು ಆಕ್ರಮ ಗಣಿಗಾರಿಕೆ ಮಾಡುವವ ಪರವಾಗಿ ಇರುವ ತಹಶೀಲ್ದಾರರ ಈ ನಡೆ ಸಾರ್ವಜನಿಕರಲ್ಲಿ ಹಲವಾರು ಅನುಮಾನಗಳನ್ನು ಮೂಡಿಸಿದೆ. ನಗರ ಮಧ್ಯಭಾಗದಲ್ಲಿ ಅಕ್ರಮ ಗಣಿಗಾರಿಕೆ ಮಾಡುವುದು



ನಿಯಮಗಳ ಪ್ರಕಾರ ಅವಕಾಶ ಇರುವುದಿಲ್ಲ. ಒಂದು ವೇಳೆ ಮರಳು ಗಣಿಗಾರಿಕೆ ಮಾಡುವುದಿದ್ದರೆ ಸರ್ಕಾರದ ನಿಗದಿ ಪಡಿಸಿದ ನಿರ್ಧಿಷ್ಟ ಸ್ಥಳದಲ್ಲಿ ಮಾತ್ರ ಮರಳು ಗಣಿಗಾರಿಕೆ ಮಾಡಬಹುದು ಆದರೆ, ಮರಳು ಗಣಿಗಾರಿಕೆ ಮಾಡದೇ ಇತರ ಅಕ್ರಮ ಗಣಿಗಾ–ರಿಕೆ ಮಾಡುತ್ತಿದ್ದರು ತಹಶೀಲ್ದಾರರು ಇವರ ಜೊತೆ ಶಾಮೀಲಾಗಿ ಅಕ್ರಮ ಗಣಿಗಾರಿಕೆಗೆ ಕುಮ್ಮಕ್ಕು ನೀಡುತ್ತಿದ್ದಾರೆ.ಹಿರೇ ಹಳ್ಳದಲ್ಲಿ ಅಕ್ರಮ ಗಣಿಗಾರಿಕೆಯಿಂದ ಸುಮಾರು 25 ರಿಂದ 30 ಅಡಿ ಆಳವಾದ ಕಂದಕ ನಿರ್ಮಾಣವಾಗಿದೆ. ಇದರಿಂದ ದನಕರುಗಳು, ರೈತರು ಹಾಗೂ ಸಾರ್ವಜನಿಕರು ಈ ಕಂದಕದಲ್ಲಿ ಅಪ್ಪಿತಪ್ಪಿ ಬಿದ್ದರೆ ಏನು ಗತಿ ಇದಕ್ಕೆ ಯಾರು ಹೊಣೆ? ಇದಕ್ಕೆ ತಹಶೀಲ್ದಾರರೇ ಉತ್ತ–ರಿಸಬೇಕಾಗಿದೆ. ಪೊಲೀಸರು ಸಹ ಈ ಆಕ್ರಮ ಗಣಿಗಾರಿಕೆಯಲ್ಲಿ ಶಾಮೀಲಾಗಿರುವುದು ಕಂಡುಬರುತ್ತಿದೆ. ನಗರ ಮಧ್ಯಭಾಗದಲ್ಲಿರುವ ಹಿರೇ ಹಳ್ಳದಲ್ಲಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಅಕ್ರಮ ಗಣಿಗಾರಿಕೆಗೆ ಬಳಸುವ ಯಂತ್ರಗಳನ್ನು ಹಾಗೂ ಟಿಪ್ಪರ್‌ಗಳನ್ನು ವಶಕ್ಕೆ ಪಡೆದುಕೊಳ್ಳಬೇಕು. ಈ ಆಕ್ರಮ ಗಣಿಗಾರಿಕೆಯಲ್ಲಿ ಶಾಮೀಲಾಗಿರುವ ತಹಶೀಲ್ದಾರರನ್ನು ಕೂಡಲೇ ಅಮಾನತ್ತು ಮಾಡಬೇಕು. ಭೂ ಸಂಪತ್ತನ್ನು ರಕ್ಷಿಸಬೇಕು ಇಲ್ಲವಾದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಶಿವಪುತ್ರ ನಂದಿಹಾಳ್ , ಲಕ್ಷ್ಮಣ್ ಮುಕ್ಕಣ್ಣ , ಆನಂದ್ ಕುಂಬಾರ್ , ನಿರೂಪಾದೆಪ್ಪ , ಬಸಪ್ಪ , ಹನುಮನ ಗೌಡ , ಹನುಮಪ್ಪ , ಬಸವರಾಜ್ ಗುಂಡಸಾಗರ ಸೇರಿದಂತೆ ಇತರರು ಇದ್ದರು .

# ವಚನ ದರ್ಶನ

ಎನ್ನ ಕಾಯವ ದಂಡಿಗೆಯ
ಮಾಡಯ್ಯಾ ಎನ್ನ ಶಿರವ ಸೋರೆಯ
ಮಾಡಯ್ಯಾ ಎನ್ನ ನರವ ತಂತಿಯ
ಮಾಡಯ್ಯಾ, ಎನ್ನ ಬೆರಳ ಕಡ್ಡಿಯ
ಮಾಡಯ್ಯಾ ಬತ್ತೀಸ ರಾಗವ
ಹಾಡಯ್ಯಾ, ಉರದಲೊತ್ತಿ
ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣ-ಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾ-ರಿದೀಪವಾಗಿವೆ. ನಾವು ನೀವು ವಚನದ ದಾ-ರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ
ಸಾಲಿಮಠ ಅಂತರಗಂಗಿ
ಸಿಂಧನೂರು
9980094144

## ಜೆಡಿಎಸ್ ಎಸ್ಸಿ ಮೋರ್ಚಾ ತಾಲೂಕು ಅಧ್ಯಕ್ಷರಾಗಿ ಮಾರೆಪ್ಪ ಮಾಸ್ಟರ್ ಕೊತ್ತಾದೊಡ್ಡಿ ನೇಮಕ

ನೈಜ್ಯ ದೆಸೆ ನ್ಯೂಸ್



ಅರಕೇರಾ ಆ.17: ಜೆಡಿಎಸ್ ಪಕ್ಷದ ಎಸ್ಸಿ ಮೋರ್ಚಾ ಅರಕೇರಾ ತಾಲ್ಲೂಕು ಅಧ್ಯಕ್ಷರಾಗಿ ಕೊತ್ತಾದೊಡ್ಡಿ ಗ್ರಾಮದ ಮಾರೆಪ್ಪ ಮಾಸ್ಟರ್ ಅವರನ್ನು ನೇಮಕ ಮಾಡಲಾಗಿದೆ. ಶಾಸಕಿ ಕರೆಮ್ಮ ಜಿ. ನಾಯಕ ಹಾಗೂ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಿದ್ದಣ್ಣ ಬಿ. ಗಣೇಕಲ್ ಅವರ ಆದೇಶದ ಮೇರೆಗೆ ಈ ನೇಮಕಾತಿ ಮಾಡಲಾಗಿದ್ದು, ತಕ್ಷಣದಿಂದಲೇ ಪಕ್ಷದ ಜವಾಬ್ದಾರಿ ವಹಿಸಿಕೊಂಡು ಜೆಡಿಎಸ್ ಸಂಘಟನೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡುವಂತೆ ಸೂಚನೆ ನೀಡಿದ್ದಾರೆ. ನೇಮಕಗೊಂಡ ಮಾರೆಪ್ಪ ಮಾಸ್ಟರ್ ಕೊತ್ತಾದೊಡ್ಡಿ ಅವರಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು ಅಭಿನಂದನೆ ಸಲ್ಲಿಸಿದ್ದು, ಪಕ್ಷ ಸಂಘಟನೆಗೆ ಇನ್ನಷ್ಟು ಬಲ ತುಂಬುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಭಕ್ತಾದಿಗಳಿಗೆ ಮಠಕ್ಕೆ ಬಂದು ಹೋಗಲು ಮತ್ತು ವಾಹನಗಳ ನಿಲುಗಡೆಗೆ ಅಡಚಣೆ ಉಂಟಾಗಿದ್ದು ಸೂಕ್ತ ಕ್ರಮ ಜರುಗಿಸುವಂತೆ ಮುತಾಲಿಕ್ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಆ 18 – ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೂರ್ವ ದಿಕ್ಕಿಗೆ ಇರುವ ರಸ್ತೆಯ ಜಾಗೆಯಲ್ಲಿ ವನಜಾ ಬಾಯಿ ಗಂ. ದಿ: ರಾಘವೇಂದ್ರಾಚಾರ್ಯ ಜೋಷಿ ಇವರ ಮಗನಾದ ಪವನ ಜೋಷಿ ಹಾಗೂ ಇತರರು ಕೂಡಿಕೊಂಡು ಮಠದ ಜಾಗೆಯನ್ನೊಳಗೊಂಡ ರಸ್ತೆಯಲ್ಲಿ ತಂತಿಬೆಲಿ ಹಾಕಿದ್ದು, ಅದರಲ್ಲಿ ಹೈ-ಮಾರ್ಸ್ ಲೈಟ್ ಮತ್ತು ವಿದ್ಯುತ್ ಕಂಬಗಳು ಒಳಗೊಂಡಿರುತ್ತವೆ. ಇದರಿಂದ ಸದರಿ ತಂತಿ ಬೆಲಿಯನ್ನು ಅನಾಧಿಕೃತವಾಗಿ ಪುರಸಭೆಯ ಆದೇಶಕ್ಕೆ ವಿರುದ್ಧವಾಗಿ ಹಾಕಿಕೊಂಡಿದ್ದು ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಠಕ್ಕೆ ಬಂದು ಹೋಗಲು ಮತ್ತು ವಾಹನಗಳ ನಿಲುಗಡೆಗೆ ಅಡಚಣೆ ಉಂಟಾಗಿದ್ದು ಸೂಕ್ತ ಕ್ರಮ ತೆಗೆದುಕೊಂಡು ಸದರಿ ತಂತಿ ಬೆಲಿಯನ್ನು ತೆಗೆದು ಹಾಕಬೇಕೆಂದು ಮುತಾಲಿಕ್



ರಾಘವೇಂದ್ರ ರಾವ್ ವಕೀಲರು ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು .ಶ್ರೀ ರಾಘವೇಂದ್ರ ಸ್ವಾಮಿಯವರ ಮಠದ ಜಾಗೆಯನ್ನು ನೊಂದಾಯಿತ ಖರೀದಿ ಪತ್ರ ಸಂ.1340/1-4-72 ಹೊಸ ನಂ. 2-11-153 ಪೂರ್ವ-ಪಶ್ಚಿಮವಾಗಿ: 189 ಅಡಿ ಹಾಗೂ ಉತ್ತರ-ದಕ್ಷಿಣವಾಗಿ: 249 ಅಡಿ ಜಾಗೆಯನ್ನು ಖರೀದಿಸಿ, ಸದರಿ ಜಾಗೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಮಂದಿರ, ಈಶ್ವರ ದೇವಸ್ಥಾನ, ಹನುಮಂತ ದೇವ ದೇವಸ್ಥಾನ ಹಾಗೂ ಗಜಾನನ ದೇವಸ್ಥಾನವನ್ನು ಒಳಗೊಂಡಿದ್ದು, ಅದರ ಪಕ್ಕದಲ್ಲಿ ಕಲ್ಯಾಣ ಮಂಟಪ ರಚನೆಯನ್ನು ಮಾಡಿದ್ದು ಇರುತ್ತದೆ. ಸದರಿ ಆಸ್ತಿಯ ನಾಲ್ಕೂ ದಿಕ್ಕಿನ ಕಡೆಗೂ ರಸ್ತೆಗಳಿರುತ್ತವೆ. ವಸ್ತು ಸ್ಥಿತಿ ಹೀಗಿದ್ದಾಗ್ಯೂ ಕೂಡ ಪವನ ಜೋಷಿ ಹಾಗೂ ಇತರರು ಕೂಡಿಕೊಂಡು ಕಾನೂನು ಭಾಹಿರವಾಗಿ ತಂತಿ ಬೆಲಿ ಹಾಕಿರುವುದರಿಂದ ಭಕ್ತಾದಿಗಳಿಗೂ ಹಾಗೂ ಸಾರ್ವಜನಿಕರಿಗು ಅಡೆ-ತಡೆ ಉಂಟಾಗಿರುತ್ತದೆ. ಸದರಿಯವರ ಕಾರ್ಯವನ್ನು ಗಮನಿಸಿ ಪುರಸಭೆಯವರು ಯಾವುದೇ ಕಟ್ಟಡ ಅಥವಾ ತಾತ್ಕಾಲಿಕ ಷೆಡ್ಡುಗಳನ್ನು, ತಂತಿ ಬೆಲಿಯನ್ನು ಹಾಕಬಾರದೆಂದು ದಿನಾಂಕ: 29/05/2026 ರಂದು ಆದೇಶ ನೀಡಿರುತ್ತಾರೆ. ಸದರಿ ಆದ-ೇಶವನ್ನು ಉಲ್ಲಂಘನೆ ಮಾಡಿದ್ದಲ್ಲದೇ ಮಠದ ಮುಂದೆ ನಿಂತು ಮನಸೋ ಇಚ್ಛೇ ಬೈಗುಳ ಸುರಿಮಳೆಯನ್ನು ಮಾಡುತ್ತಿದ್ದಾರೆ. ಕಾರಣ ಸದರಿಯವರ ವರ್ತನೆ ಹಾಗೂ ಹಾಕಿರುವ ತಂತಿ ಬೆಲಿ ಕಾರ್ಯವನ್ನು ಗಮನಿಸಿ ಸದ-ರಿಯವರ ಮೇಲೆ ಸೂಕ್ತ ಕ್ರಮ ಕೈಗೊಂಡು ತಂತಿಬೆಲಿಯನ್ನು ತೆರವುಗೊಳಿಸಲು ಆದೇಶ ನೀಡಬೇಕು, ಅಲ್ಲದೇ ದಿನಾಂಕ: 29/08/2026 ರಿಂದ 01/09/2026 ರವರೆಗೆ ಶ್ರೀ ರಾಘವೇಂದ್ರ ಸ್ವಾಮಿಯವರ ಆರಾಧನೆ ಕಾರ್ಯಕ್ರಮ ಜರುಗತಲಿದ್ದು, ಲಿಂಗಸಗೂರು ಹಾಗೂ ಸುತ್ತ-ಮುತ್ತಲಿನ ಹಳ್ಳಿಗಳಿಂದ ಬರುವ ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟಾಗುವ ನಿಮಿತ್ಯ ಕಾನೂನುಭಾಹಿರ ಚಟುವಟಿಕೆಗಳು ಸಂಭವಿಸಬಹುದೆಂದು ತಿಳಿದು ಶೀಘ್ರವಾಗಿ ಸದರಿಯವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಹನುಮೇಶ ಮುತಾಲಿಕ, ನಾರಾಯಣ ಬಿಜ್ಜೂರ , ಕೋಪರೇಶ ಜೋಶಿ, ಹೃಷಿ ಗೋತಗಿ, ಪುರಷೋತಮ ಮುತಾಲಿಕ, ರತ್ನಾಕರ, ತ್ರಿವಿಕ್ರಮ ಜಾಹಿಗಿರದಾರ, ಕಿಶೋರ ಮುತಾಲಿಕ, ವೆಂಕಟೇಶ್ ಶಾಸ್ತ್ರಿ, ವೇಣುಗೋಪಾಲ ಶಾಸ್ತ್ರೀ ಸೇರಿದಂತೆ ಇನ್ನು ಹಲವರು ಇದ್ದರು .

# ವಿಶ್ವದಲ್ಲಿ ಭಾರತ ವಿಶಿಷ್ಟವಾದ ದೇಶ: ಬೀರಪ್ಪ ಶಂಭೋಜಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು : ವಿಶ್ವದಲ್ಲಿ ಭಾರತ ವಿಶಿಷ್ಟವಾದ ದೇಶವಾಗಿದೆ ಹಿಂದಿನ ಕಾಲದಿಂದಲೂ ಕಲೆ, ಸಾಹಿತ್ಯ, ಕೃಷಿ, ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ ಇಂದಿನ ಯುವಕರು ಹಿರಿಯರನ್ನು ಗೌರವಿಸುವುದರ ಜೊತೆಗೆ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು ಭವ್ಯ ಭಾರತವನ್ನು ಇನ್ನಷ್ಟು ಬಲಿಷ್ಠ ಮತ್ತು ಪ್ರಗತಿಪಥದಲ್ಲಿ ಮುಂದಾಗಬೇಕು ಹಿಂದಿನ





ರಾಷ್ಟ್ರನಾಯಕರ ವೇಷಭೂಷಣಗಳನ್ನು ಧ-ರಿಸಿದ ಇಂದಿನ ಚಿಕ್ಕ ಮಕ್ಕಳು, ಇಸ್ರೋ ರಾಕೇಟ್ ಮಾದರಿಯನ್ನು ತಯಾರಿಸಿದಾರೆ, ರಕ್ಷಣಾ ವಿಭಾಗದ ಭೂದಳ, ವಾಯುದಳ ಹಾಗೂ ನೌಕಾದಳದ ಉಡುಪುಗಳಲ್ಲಿ ಮಕ್ಕಳು ಗಮನ ಸೇಳೆದಿದ್ದಾರೆ. ಇವರೆಲ್ಲ ಮುಂದಿನ ನಾಯಕರಾಗುತ್ತಾರೆಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಬೀರಪ್ಪ ಶಂಭೋಜಿ ಹೇಳಿದರು. ಅವರು ನಗರದ ಕೋಟೆ ಭಾಗದಲ್ಲಿರುವ ಸೌದಾಗರ ಮಾಂಟೆಸ್ಸರಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 80ನೇ ಸ್ವಾತಂತ್ರೋತ್ಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ ಅಸದ್ ಖಾನ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಯೋಗ ಗುರು, ತಾಲೂಕ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಭಾಸ್ಕರ್ ಮಾತನಾಡಿ ಯುವಶಕ್ತಿ ದೇಶದ ಆಸ್ತಿ ಎಲ್ಲ ಯುವಕರು ಸದೃಢವಾದ ಆರೋಗ್ಯವನ್ನು ಹೊಂದಿರಬೇಕೆಂದರು. ಸೈಫುಲ್ಲಾ, ಸೈಯದ್‌ಮೈನುದ್ದೀನ, ಚಂದ್ರು ಬಾಬಾ, ಸಂಸ್ಥೆಯ ಕಾರ್ಯದರ್ಶಿ ಶಾರೂಫ್‌ಖಾನ್ ಉಪಸ್ಥಿತರಿದ್ದರು. ನಾಗವೇಣಿ, ನಿಹಾರಿಕಾ ಪ್ರಾರ್ಥಿಸಿದರು, ವೆಂಕಟೇಶ್ವರಾವ್ ಸ್ವಾಗತಿಸಿದರು, ತಹಸೀನ್ ವಂದಿಸಿದರು ಶಿಕ್ಷಕ ರಾಜಣ್ಣ ನಿರೂಪಿಸಿದರು.

# ಗುಡಿಸಲು ತೆರವು: ನಿರಾಶ್ರಿತರ ಧರಣಿ ಸತ್ಯಾಗ್ರಹ-ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ಭೇಟಿ

ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ತಾಲ್ಲೂಕಿನ ತೆಕ್ಕಲಕೋಟೆ ಪಟ್ಟಣದ 2ನೇ ವಾರ್ಡ್‌ನ ಪೌರಕಾರ್ಮಿಕರ ವಸತಿ ನಿವೇಶನಗಳಲ್ಲಿ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕುಟುಂಬಗಳ ಸದಸ್ಯರು, ಗುಡಿಸಲುಗಳನ್ನು ನೆಲಸಮಗೊಳಿಸಿದ ಸ್ಥಳದಲ್ಲೇ ಕಳೆದ ನಾಲ್ಕು ದಿನಗಳಿಂದ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.ಮೂರು ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪಟ್ಟಣ ಪಂಚಾಯಿತಿ ನೂತನ ಕಟ್ಟಡಕ್ಕೆ ಆ.16ರಂದು ಭೂಮಿಪೂಜೆ ನಿಗದಿಯಾಗಿದ್ದ ಹಿನ್ನೆಲೆಯಲ್ಲಿ, ಸ್ಥಳದಲ್ಲಿದ್ದ 15 ಕೂಲಿ ಕಾರ್ಮಿಕ ಕುಟುಂಬಗಳ ಗುಡಿಸಲುಗಳನ್ನು ತೆರವುಗೊಳಿಸಲಾಗಿತ್ತು. ಆದರೆ, ತೆರವು ಕಾರ್ಯಾಚರಣೆಗೂ ಮುನ್ನ ಅಥವಾ ನಂತರ ಪರ್ಯಾಯ ವಸತಿ ವ್ಯವಸ್ಥೆ ಕಲ್ಪಿಸದಿರುವುದಕ್ಕೆ ಸಂತ್ರಸ್ತರು ಆಕ್ರೋಶ



ವ್ಯಕ್ತಪಡಿಸಿದ್ದಾರೆ.ಸೋಮವಾರ ಧರಣಿ ನಿರತ ಸ್ಥಳಕ್ಕೆ ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ಭೇಟಿ ನೀಡಿ ಸಂತ್ರಸ್ತರ ಅಹವಾಲು ಆಲಿಸಿದರು. ಬಳಿಕ ಮಾತನಾಡಿದ ಅವರು, "ಅಧಿಕಾರಿಗಳು ಮತ್ತು ಶಾಸಕರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಕುಟುಂಬಗಳನ್ನು ಬೀದಿಗೆ ತಳ್ಳಿದ್ದಾರೆ. ಪರ್ಯಾಯ ವ್ಯವಸ್ಥೆ ಕಲ್ಪಿಸದೆ ಮನೆಗಳನ್ನು ತೆರವುಗೊಳಿಸಿರುವುದು ದುರಂತ" ಎಂದು ಆರೋಪಿಸಿದರು."ಇಲ್ಲಿ ಪೌರಕಾರ್ಮಿಕರು, ಹಮಾಲಿಗಳು ಹಾಗೂ ಕೂಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ತರಾತುರಿಯಲ್ಲಿ ಗುಡಿಸಲುಗಳನ್ನು ನೆಲಸಮಗೊಳಿಸಿರುವುದ-ರಿಂದ ವಯೋವೃದ್ಧರು, ಮಹಿಳೆಯರು ಹಾಗೂ ಚಿಕ್ಕ ಮಕ್ಕಳು ಚಳಿ, ಮಳೆಯಲ್ಲೇ ದಿನ ಕಳೆಯುವಂತಾಗಿದೆ" ಎಂದು ಅವರು ಹೇಳಿದರು."ಸರ್ಕಾರ ಮತ್ತು ಅಧಿಕಾರಿಗಳು ಸಂತ್ರಸ್ತರಿಗೆ ಸೂಕ್ತ ನಿವೇಶನ ಹಾಗೂ ಪರಿಹಾರ ಕಲ್ಪಿಸುವವರೆಗೆ ಬಿಜೆಪಿ ನೊಂದವರ ಪರವಾಗಿ ನ್ಯಾಯಕ್ಕಾಗಿ ಹೋರಾಟ ನಡೆಸಲಿದೆ" ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ. ಎಸ್. ಸಿದ್ದಪ್ಪ ಹೇಳಿದರು."ಗುಡಿಸಲು ತೆರವುಗೊಳಿಸಿದ ದಿನದಿಂದ ಕೂಲಿ ಕೆಲಸಕ್ಕೆ ಹೋಗಿಲ್ಲ. ಕುಡಿಯಲು ನೀರಿಲ್ಲ, ಊಟ-ತಿಂಡಿಗೂ ವ್ಯವಸ್ಥೆಯಿಲ್ಲ. ಮಕ್ಕಳನ್ನು ಕಟ್ಟಿಕೊಂಡು ಉಪವಾಸ ಇರುವಂತಾಗಿದೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಹಾರ ಕಲ್ಪಿಸುವವರೆಗೆ ಇಲ್ಲಿಂದ ಕದಲುವುದಿಲ್ಲ" ಎಂದು ಸಂತ್ರಸ್ತರಾದ ಮಲ್ಲಮ್ಮ, ಶಾಂತಮ್ಮ ಹಾಗೂ ಗುರುಪಾದಿ ಕಣ್ಣೀರಿಟ್ಟರು.ಈ ಸಂದರ್ಭದಲ್ಲಿ ಮುಖಂಡರಾದ ಕೊಮಾರೆಪ್ಪ, ರಾಘವೇಂದ್ರ, ಅಫ್ಜಲ್ ಸಾಬ್, ಗುರುಸಿದ್ದಪ್ಪ ಹಾಗೂ ಖಾಜಾ ಹುಸೇನ್ ಉಪಸ್ಥಿತರಿದ್ದರು. ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ಸಿಂಧನೂರಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು — ವಿಧಾನ ಪರಿಷತ್‌ನಲ್ಲಿ ಗಟ್ಟಿಯಾಗಿ ಧ್ವನಿ ಎತ್ತಿದ ಎಂಎಲ್‌ಸಿ ಬಸನಗೌಡ ಬಾದರ್ಲಿ!

ನೈಜ್ಯ ದೆಸೆ ನ್ಯೂಸ್

ಸಿಂಧನೂರು ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರದೇಶವಾಗಿದೆ. ಪ್ರಾಥಮಿಕ ಶಿಕ್ಷಣದಿಂದ ವೃತ್ತಿಪರ ಶಿಕ್ಷಣದವರೆಗೆ ಹಲವು ಅವಕಾಶಗಳು ಲಭ್ಯವಿದ್ದರೂ, ಇಂಜಿನಿಯರಿಂಗ್ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ದೂರದ ನಗರಗಳಿಗೆ ತೆರಳಬೇಕಾದ ಅನಿವಾರ್ಯತೆ ಇನ್ನೂ ಇದೆ. ಇದರಿಂದ ವಿಶೇಷವಾಗಿ ಗ್ರಾಮೀಣ ಭಾಗದ ಹಾಗೂ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳವಿದ್ಯಾರ್ಥಿಗಳಿಗೆ ಹೆಚ್ಚುವರಿ ಪ್ರಯಾಣ ವೆಚ್ಚ, ವಸತಿ ವೆಚ್ಚ ಮತ್ತು ಇತರ ಆರ್ಥಿಕ ಹೊರೆ ಎದುರಾಗುತ್ತಿದೆ.ಈ ವಾಸ್ತವಿಕ ಸಮಸ್ಯೆಯನ್ನು ವಿಧಾನ ಪರಿಷತ್‌ನಲ್ಲಿ



ಪ್ರಸ್ತಾಪಿಸಿದ ಶ್ರೀ ಬಸನಗೌಡ ಬಾದರ್ಲಿ ಅವರು,ಸಿಂಧನೂರು ತಾಲೂಕಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡುವಂತೆ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದಿದ್ದಾರೆ.ಇದು ಕೇವಲ ಒಂದು ಕಾಲೇಜಿನ ಬೇಡಿಕೆಯಲ್ಲ.ಇದು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ಬೇಡಿಕೆ, ಇದು ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಬೇಡಿಕೆ. ಇದು ಬಡ ಕುಟುಂಬಗಳ ಮಕ್ಕಳಿಗೆ ಕೈಗೆಟುಕುವ ಉನ್ನತ ಶಿಕ್ಷಣದ ಬೇಡಿಕೆ. ಇದು ಸಿಂಧನೂರಿನ ಶೈಕ್ಷಣಿಕ ಅಭಿವೃದ್ಧಿಗೆ ಅಗತ್ಯವಾದ ಹೆಜ್ಜೆ.ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಬಂದರೆ... ಸ್ಥಳೀಯ ವಿದ್ಯಾರ್ಥಿಗಳಿಗೆ ತಮ್ಮ ಊರಿನಲ್ಲಿಯೇ ಇಂಜಿನಿಯರಿಂಗ್ ಶಿಕ್ಷಣ ಪಡೆಯುವ ಅವಕಾಶ ಸಿಗಲಿದೆ. ದೂರದ ನಗರಗಳಿಗೆ ತೆರಳುವ ವಿದ್ಯಾರ್ಥಿಗಳ ಪ್ರಯಾಣ ಮತ್ತು ವಸತಿ ವೆಚ್ಚ ಕಡಿಮೆಯಾಗಲಿದೆ. ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ತಾಂತ್ರಿಕ ಶಿಕ್ಷಣದ ಅವಕಾಶ ಹೆಚ್ಚಲಿದೆ. ಸಿಂಧನೂರಿನ ಶೈಕ್ಷಣಿಕ ವಾತಾವರಣ ಮತ್ತಷ್ಟು ಬಲಗೊಳ್ಳಲಿದೆ. ಯುವಜನತೆಗೆ ಕೌಶಲ್ಯ, ಉದ್ಯೋಗ ಮತ್ತು ವೃತ್ತಿಜೀವನದ ಹೊಸ ಅವಕಾಶಗಳು ದೊರೆಯಲಿವೆ. ತಾಲೂಕಿನ ಸಮಗ್ರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ.ಒಬ್ಬ ವಿದ್ಯಾರ್ಥಿಯ ಕನಸು ನನಸಾದರೆ ಒಂದು ಕುಟುಂಬದ ಭವಿಷ್ಯ ಬದಲಾಗುತ್ತದೆ; ಸಾವಿರಾರು ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕರೆ ಇಡೀ ಪ್ರದೇಶದ ಭವಿಷ್ಯ ಬದಲಾಗುತ್ತದೆ.ಆದ್ದರಿಂದ ಸಿಂಧನೂರಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯ ಬೇಡಿಕೆ ಇಂದು ಕೇವಲ ಶಿಕ್ಷಣದ ಬೇಡಿಕೆಯಾಗಿರದೆ, ಮುಂದಿನ ಪೀಳಿಗೆಯ ಭವಿಷ್ಯ ನಿರ್ಮಾಣದ ಬೇಡಿಕೆಯಾಗಿದೆ.ವಿದ್ಯಾರ್ಥಿಗಳ ಪರವಾಗಿ ವಿಧಾನ ಪರಿಷತ್‌ನಲ್ಲಿ ಧ್ವನಿ ಎತ್ತಿದ ಶ್ರೀ ಬಸನಗೌಡ ಬಾದರ್ಲಿ ಅವರಿಗೆ ಅಭಿನಂದನೆಗಳು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101